ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.
ದೂರವಾಣಿ ಸಂಖ್ಯೆ:08182-246165 E-Mail:shimulpandi@gmail.com Fax:08182-246284.

# ತಾಂತ್ರಿಕ ಟೆಂಡರ್ ಭಾಗ –1

## ಟೆಂಡರ್‌ದಾರರು ತಾಂತ್ರಿಕ ಟೆಂಡರ್ ಮತ್ತು ವಾಣಿಜ್ಯ ಟೆಂಡರ್ ದಾಖಲಾತಿಗಳನ್ನು ಮತ್ತು ಇ.ಎಂ.ಡಿ. ಮೊತ್ತವನ್ನು ಪಾವತಿಸಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮುಖಾಂತರವೇ ಅಪ್‌ಲೋಡ್ ಮಾಡತಕ್ಕದ್ದು.

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.**

# ತಾಂತ್ರಿಕ ಟೆಂಡರ್

## ದ್ವೈವಾರ್ಷಿಕ ದರ ಗುತ್ತಿಗೆ

## ತಾಂತ್ರಿಕ ಟೆಂಡರ್ ಭಾಗ—1

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | **03.09.2019 ರಿಂದ** |
| 2 | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | 03.10.2019 ರಂದು ಸಂಜೆ: 17.30 ಗಂಟೆಯವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | **05.10.2019** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | **09.10.2019** ರಂದು ಬೆಳಿಗ್ಗೆ: **11.30** ಗಂಟೆಗೆ |

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.**

**ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/08/4146/2019–20** **ದಿನಾಂಕ: 29.08.2019**

# ಶಿವಮೊಗ ಹಾಲು ಒಕ್ಕೂಟದ ವ್ಯಾಪ್ತಿಯ ಸಂಘಗಳಲ್ಲಿ ಶೇಖರಣೆಯಾದ ಕಚ್ಚಾ ಹಾಲನ್ನು ಶಿವಮೊಗ್ಗ, ದಾವಣಗೆರೆ ಡೇರಿ ಮತ್ತು ಟೆಂಡರ್‌ನಲ್ಲಿ ನಮೂದಿಸಿದ ಶೀತಲೀಕರಣ ಕೇಂದ್ರಕ್ಕೆ ಸಾಗಾಣಿಕೆ ಮಾಡಲು ಮತ್ತು ಸಂಚಾರಿ ಪಶುವೈದ್ಯಕೀಯ ವಿವಿಧ ಸಾಮರ್ಥ್ಯದ/ಮಾದರಿಯ ಸಾರಿಗೆ ವಾಹನ /ಮ್ಯಾಕ್ಸ್ ಪಿಕಪ್/ಕಾರಿನ ವಾಹನಗಳನ್ನು ದ್ವೈವಾರ್ಷಿಕ ಅವಧಿಗೆ ಒದಗಿಸಲು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ

ಅ) ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಬರುವ ಹಾಲು ಉತ್ಪಾದಕರ ಸಂಘಗಳಿಂದ ಶೇಖರಣೆ ಮಾಡಲಾದ ಕಚ್ಚಾ ಹಾಲನ್ನು ಶಿವಮೊಗ್ಗ ಡೈರಿ, ದಾವಣಗೆರೆ ಡೈರಿ, ಚಿತ್ರದುರ್ಗ, ಬಿ.ಜಿ.ಕೆರೆ, ಆನಂದಪುರ, ತಡಗಣಿ ಮತ್ತು ಹೊನ್ನಾಳಿ ಶೀತಲೀಕರಣ ಕೇಂದ್ರಗಳಿಗೆ ಸಾಗಾಣಿಕೆ ಮಾಡಲು ಹಾಲು ಶೇಖರಣಾ ಮಾರ್ಗಗಳಿಗೆ ವಾಹನ ಒದಗಿಸಲು ಹಾಗೂ

ಆ) ಒಕ್ಕೂಟದ ವ್ಯಾಪ್ತಿಯ ಸಂಚಾರಿ ಪಶುವೈದ್ಯಕೀಯ ಮಾರ್ಗಗಳಿಗೆ ಹಳದಿ ಬೋರ್ಡ್ ಹೊಂದಿರುವ ಕಾರುಗಳನ್ನು ಎರಡು ವರ್ಷಗಳ ಅವಧಿಗೆ ಒದಗಿಸಲು

ಇ) **ಶಿವಮೊಗ್ಗ ಡೇರಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪಡೆದು ಭದ್ರಾವತಿ ಗ್ರಾಮಾಂತರ ಸಾಸ್ವೇಹಳ್ಳಿ ಮತ್ತು ಬಸವಾಪಟ್ಟಣ ಡೀಲರ್‌ಗಳಿಗೆ ವಿತರಣೆ ಮಾಡುವುದು ಹಾಗೂ ನಗದು ಸಂಗ್ರಹಿಸಿ ಒಕ್ಕೂಟಕ್ಕೆ ಜಮಾ ಮಾಡಲು ಎರಡು ವರ್ಷಗಳ ಅವಧಿಗೆ ಇನ್ಸೂಲೇಟೆಡ್ ವಾಹನ ಒದಗಿಸಲು**

ಈ) **ಶಿವಮೊಗ್ಗ ಡೈರಿಯಿಂದ ಹುಲ್ಲಿನ ಬೀಜ/ಉಗ್ರಾಣ ಸಾಮಾಗ್ರಿಗಳನ್ನು ಅವಶ್ಯಕತೆ ಇದ್ದಾಗ ಮಾತ್ರ ಒಕ್ಕೂಟದ ವ್ಯಾಪ್ತಿಯ ಮೂರು ಜಿಲ್ಲೆಗಳ ಸಂಘಗಳಿಗೆ/ಉಗ್ರಾಣಗಳಿಗೆ ಸಾಗಾಣಿಕೆ ಮಾಡಲು 2.5 ಟನ್ ಸರಕು ಸಾಗಾಣಿಕೆ ವಾಹನ ಒದಗಿಸಲು**

ಮೇಲ್ಕಂಡ ಎಲ್ಲಾ ವಾಹನಗಳ ಗುತ್ತಿಗೆ ಅವಧಿ ಎರಡು ವರ್ಷಗಳದ್ದಾಗಿರುತ್ತದೆ

ನಿಬಂಧನೆಗಳು :

1. **ಟೆಕ್ನಿಕಲ್ /ಕಮರ್ಷಿಯಲ್ ಟೆಂಡರ್‌ನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಡಿ ಸಲ್ಲಿಸುವುದು.**

2. **ಸಂಚಾರಿ ಪಶುವೈದ್ಯಕೀಯ ಮಾರ್ಗಗಳಿಗೆ 2015 ರ ಅಥವಾ ನಂತರದ ಮಾದರಿಯ ಹಳದಿ ಬೋರ್ಡ್ ವಾಹನ ಹೊಂದಿದ ವಾಹನ ಮಾಲೀಕರು ಡೀಸೆಲ್ ಟಾಟಾ ವಿಸ್ತಾ/ಇಂಡಿಗೋ/ಇಟಿಯೋಸ್/ಜೆಸ್ಟ್/ಸಿಫ್ಟ್ ಡಿಸೇರ್ ಕಾರುಗಳನ್ನು ಎರಡು ವರ್ಷದ ಅವಧಿಗೆ ಟೆಂಡರ್ ಸಲ್ಲಿಸುವುದು. ಟೂರಿಸ್ಟ್/ಏಜೆನ್ಸಿಗಳಿಗೆ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.**

3. ಸಲ್ಲಿಸಲ್ಪಟ್ಟ ಟೆಂಡರ್‌ಗಳಲ್ಲಿ ಟೆಕ್ನಿಕಲ್ ಟೆಂಡರ್‌ನ್ನು **ದಿ: 03.10.2019** ರಂದು **ಬೆಳಿಗ್ಗೆ 11.30** ಘಂಟೆಗೆ ತೆರೆಯಲಾಗುವುದು.

4. ಪ್ರತಿ ಮಾರ್ಗಕ್ಕೂ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ. ಸಲ್ಲಿಸುವುದು ಒಂದೇ ವಾಹನವುಳ್ಳವರು ಒಂದು ಮಾರ್ಗಕ್ಕಿಂತ ಹೆಚ್ಚಿನ ಮಾರ್ಗಗಳಿಗೆ ಅರ್ಜಿ ಸಲ್ಲಿಸುವಂತಿಲ್ಲ.

5. ವಾಹನ ಹೊಂದಿರುವವರು ಟೆಂಡರ್ ತೆರೆಯುವ ಸಮಯದಲ್ಲಿ, ಪರಿಶೀಲನೆಗಾಗಿ ಟೆಂಡರ್‌ನಲ್ಲಿ ಪ್ರಕಟಿಸಿರುವ ಮಾದರಿಯ/ಸಾಮರ್ಥ್ಯದ ವಾಹನಕ್ಕೆ ಸಂಬಂಧಿಸಿದ ದಾಖಲೆಗಳ ಮೂಲ ಪ್ರತಿ ಒದಗಿಸಬೇಕು. ವಾಹನ ಹೊಂದಿಲ್ಲದವರು ಟೆಂಡರ್ ಒಪ್ಪಿಗೆಯಾದಲ್ಲಿ ನಿಗದಿತ ಮಾದರಿಯ ವಾಹನ ಒದಗಿಸತಕ್ಕದ್ದು.

6. ಟೆಂಡರ್ ಸಲ್ಲಿಸಬಯಸುವವರು ತಮ್ಮ ಹೆಸರಿಗೆ ಸ್ವಂತ ವಾಹನ ಹೊಂದಿರಬೇಕು. ಸ್ವಂತ ವಾಹನ ಹೊಂದಿಲ್ಲದವರಿಗೆ ಟೆಂಡರ್ ಒಪ್ಪಿಗೆ ಆದಲ್ಲಿ ನಿಗದಿತ ಅವಧಿಯೊಳಗೆ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿದ ಸಾಮರ್ಥ್ಯದ ವಾಹನವನ್ನು ಟೆಂಡರ್ ಒಪ್ಪಿಗೆ ಆದೇಶ ತಲುಪಿದ 45 ದಿನಗಳೊಳಗಾಗಿ ವಾಹನ ಒದಗಿಸತಕ್ಕದ್ದು. ತಪ್ಪಿದ್ದಲ್ಲಿ ಇಎಂಡಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು /ವಾಪಸ್ಸು ನೀಡಲಾಗುವುದಿಲ್ಲ.

7. **ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.**

ಪ್ರತಿ ಮಾರ್ಗಕ್ಕೆ ನೀಡಬೇಕಾದ ಇ.ಎಂ.ಡಿ / ಭದ್ರತಾ ಠೇವಣಿ ಮತ್ತು / ಮಾರ್ಗಗಳ ವಿವರ ಮತ್ತು ಇತರೆ ನಿಬಂಧನೆಗಳ ವಿವರವಾದ ಷೆಡ್ಯೂಲ್‌ನ್ನು ಹಾಗೂ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿಯು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ/ ಒಕ್ಕೂಟದ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದ ಕಛೇರಿ ವೇಳೆಯಲ್ಲಿ/ ಶೇಖರಣೆ ಮತ್ತು ತಾಂತ್ರಿಕ ವಿಭಾಗದಿಂದ ಪಡೆಯಬಹುದು.

**ದೂರವಾಣಿ : (08182) 246161 & 246163.** **www.shimul.coop**

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ
ಜಿಲ್ಲಾ ಸಹಕಾರ ಹಾಲು ಒಕ್ಕೂಟ
ಶಿವಮೊಗ್ಗ.

ದಿನಾಂಕ : 29.08.2019
ಸ್ಥಳ : ಶಿವಮೊಗ್ಗ ಡೈರಿ

# ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಅರ್ಜಿ

**ಇವರಿಗೆ :**

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ**
**ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ – 577 222.**

**ಇಂದ**
**ಹೆಸರು : ................................**
**ತಂದೆಯ ಹೆಸರು :....................**
**ವಿಳಾಸ: ಮನೆ ನಂ .................**
**ರಸ್ತೆ ಹೆಸರು ............................**
**ಹಳ್ಳಿ ............................**
**ತಾಲ್ಲೂಕು/ ಜಿಲ್ಲೆ ....................**
**ಪಿನ್ ಕೋಡ್ :........................**
**ಮೊಬೈಲ್ ನಂ :**

ಸ್ವಾಮಿ,

**ವಿಷಯ :** ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ **ದ್ವೈವಾರ್ಷಿಕ** ದರ ಗುತ್ತಿಗೆ ಪಡೆಯುವ ಸಲುವಾಗಿ.

ಶಿವಮೊಗ್ಗ ಹಾಲು ಒಕ್ಕೂಟದ ಹಾಲು ಶೇಖರಣೆ/ಸಾಗಾಣಿಕೆ/ಹುಲ್ಲಿನ ಬೀಜ/ಪಶುಮೇವು ಸರಬರಾಜು/ ಕಾರಿನ ಮಾರ್ಗದ ಬಗ್ಗೆ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ದ್ವೈವಾರ್ಷಿಕ ಗುತ್ತಿಗೆ ಹಾಗೂ ತಾಂತ್ರಿಕ ಟೆಂಡರ್ ಭಾಗ –1 ರ ಅರ್ಹತೆ ಪಡೆಯುವ ಸಲುವಾಗಿ ಅರ್ಜಿ ಸಲ್ಲಿಸುತ್ತಿರುವ ಬಗ್ಗೆ ನನ್ನ ದರ ನಮೂದಿಸಿ ಅಗತ್ಯವಿರುವ ಎಲ್ಲಾ ಮಾಹಿತಿ ಮತ್ತು ದಾಖಲೆಗಳನ್ನು ಈ ಕೆಳಕಂಡಂತೆ ಸಲ್ಲಿಸುತ್ತಿದ್ದೇನೆ.

ಶ್ರೀ/ಶ್ರೀಮತಿ................................................ ಆದ ನಾನು / ನನ್ನ ಪರವಾಗಿ ಮಾರ್ಗ ಸಂಖ್ಯೆ .......................ರ (ಮಾರ್ಗದ ಹೆಸರು) .................. ಹಾಲು ಶೇಖರಣೆ ಮಾರ್ಗಕ್ಕೆ ತಕ್ಕ ಸಾಮರ್ಥ್ಯದ/ಮಾದರಿಯ ವಾಹನವನ್ನು ಹೊಂದಿದ್ದು, ದೃಢೀಕೃತ ದಾಖಲೆಗಳೊಂದಿಗೆ ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್‌ನ ಕಾನೂನಿಗೆ ಒಳಪಟ್ಟು, ಟೆಂಡರ್‌ನಲ್ಲಿ ಭಾಗವಹಿಸಲು ದಾಖಲೆಗಳನ್ನು ಲಗತ್ತಿಸಿರುತ್ತೇನೆ.

ನಾನು ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿರುವ ಸೂಚನೆಗಳು ನಿಯಮ ಮತ್ತು ನಿಬಂಧನೆಗೊಳಪಟ್ಟು ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಗುತ್ತಿಗೆಯಲ್ಲಿ ಭಾಗವಹಿಸುತ್ತಿದ್ದೇನೆ. ನನಗೆ ಟೆಂಡರ್ ಒಪ್ಪಿಗೆಯಾದಲ್ಲಿ ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿರುವ ಸಾಮರ್ಥ್ಯದ ಮತ್ತು ಮಾದರಿಯ ವಾಹನ ಒದಗಿಸಲು ಬದ್ಧನಾಗಿರುತ್ತೇನೆ. ಮತ್ತು ಹಾಲಿ ಸಾಗಾಣಿಕೆ ವಾಹನಕ್ಕೆ FSSAI ನೊಂದಣಿ/ಲೈಸನ್ಸ್ ಮಾಡಿಸಲು ಬದ್ಧನಾಗಿರುತ್ತೇನೆ.

ನನಗೆ ತಿಳಿದ ಮಟ್ಟಿಗೆ ಟೆಂಡರ್ ಸಮಿತಿಯು ಅರ್ಜಿಯನ್ನು ಯಾವುದೇ ಸೂಚನೆ ನೀಡದೆ ಅಂಗೀಕರಿಸುವ ಮತ್ತು ತಿರಸ್ಕರಿಸುವ ಸಂಪೂರ್ಣ ಅಧಿಕಾರವನ್ನು ಹೊಂದಿರುತ್ತದೆ.

ವಾಣಿಜ್ಯ ಟೆಂಡರ್ ಭಾಗ–2ನ್ನು ತೆರೆದ ದಿನದಿಂದ 60 ದಿನಗಳ ಕಾಲ ನನ್ನ ಟೆಂಡರ್ / ದರ ನೀಡಿಕೆ ಊರ್ಜಿತಾವಸ್ತೆಯಲ್ಲಿಡಲು ಒಪ್ಪಿರುತ್ತೇನೆ.

**ಮಾರ್ಗದ ಹೆಸರು :**

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

# ಅನುಬಂಧ – ಬಿ

## ದರಪಟ್ಟಿ ಸಲ್ಲಿಸಲು ನಿಯಮ ನಿಬಂಧನೆಗಳು

### 1.0 ಸಾಗಾಣಿಕೆ ಗುತ್ತಿಗೆ ವ್ಯಾಪ್ತಿ :

1.1 ಹಾಲು ಶೇಖರಣೆ/ವಿತರಣೆ ಮಾರ್ಗಕ್ಕೆ ವಾಹನ ಒದಗಿಸುವುದಾಗಿ ಸಾರಿಗೆ ಗುತ್ತಿಗೆ ಪಡೆಯುವ ಗುತ್ತಿಗೆದಾರರು ಒಕ್ಕೂಟದಿಂದ ನೀಡುವ ವೇಳಾಪಟ್ಟಿಯಂತೆ ಬೆಳಿಗ್ಗೆ ಮತ್ತು ಸಂಜೆ ಎರಡು ಸರತಿಗಳಲ್ಲಿ ಹಾಲಿನ ಸಂಘದವರು ಕ್ಯಾನಿನಲ್ಲಿ ನೀಡುವ ಕಚ್ಚಾ ಹಾಲನ್ನು ಟಾರ್ಪಲಿನ್ ಮುಚ್ಚಳಿಕೆ ಇರುವ ಲಾರಿಗೆ ಏರಿಸಿಕೊಂಡು ಸೂಚಿಸಿದ ಸಮಯದೊಳಗಾಗಿ ಶೀತಲೀಕರಣ/ಡೈರಿಗೆ ಸಾಗಾಣಿಕೆ ಮಾಡತಕ್ಕದ್ದು, ಭರ್ತಿ/ಖಾಲಿ ಹಾಲಿನ ಕ್ಯಾನ್‌ಗಳನ್ನು ಲಾರಿಗೆ ಏರಿಸುವ/ಇಳಿಸುವ ವೆಚ್ಚವನ್ನು ಗುತ್ತಿಗೆದಾರರೆ ಭರಿಸತಕ್ಕದ್ದು, ಇದಕ್ಕೆ ಪ್ರತ್ಯೇಕ ವೆಚ್ಚ ನೀಡಲಾಗುವುದಿಲ್ಲ ಹಾಗೂ ಡೈರಿ/ಶೀಥಲೀಕರಣ ಕೇಂದ್ರದಿಂದ ಹೊರಗೆ ಹೋಗುವ ಮುನ್ನ ಹಾಲಿನ ಖಾಲಿ ಕ್ಯಾನ್‌ಗಳೊಂದಿಗೆ ಟ್ರಕ್/ಟ್ರೀಪ್ ಶೀಟ್ ಪಡೆದು ಉಗ್ರಾಣ/ಶೇಖರಣೆ ಅಥವಾ ಸಂಬಂಧಿಸಿದ ವಿಭಾಗದಲ್ಲಿ ನೀಡುವ ಔಟ್ ಪಾಸ್ (Out Pass) ಪಡೆದು ಭದ್ರತಾ ವಿಭಾಗದಲ್ಲಿ ದಾಖಲಿಸಿ ಡೈರಿ/ಶೀತಲೀಕರಣ ಕೇಂದ್ರದ ಹೊರಗೆ ಹೋಗತಕ್ಕದ್ದು.

1.2 **ಹುಲ್ಲಿನ ಬೀಜ/ಪಶುಮೇವು ಸರಬರಾಜು/ಸಾಗಾಣಿಕೆ ವಾಹನ:– ಶಿವಮೊಗ್ಗ ಡೈರಿಯಿಂದ ಹುಲ್ಲಿನ ಬೀಜ/ಉಗ್ರಾಣ ಸಾಮಾಗ್ರಿಗಳನ್ನು ಅವಶ್ಯಕತೆ ಇದ್ದಾಗ ಮಾತ್ರ ಒಕ್ಕೂಟದ ವ್ಯಾಪ್ತಿಯ ಮೂರು ಜಿಲ್ಲೆಗಳ ಸಂಘಗಳಿಗೆ/ಉಗ್ರಾಣಗಳಿಗೆ ಸಾಗಾಣಿಕೆ ಮಾಡುವುದು.**

1.3 **<u>ಸಂಚಾರಿ ಪಶುವೈದ್ಯಕೀಯ ಮಾರ್ಗಕ್ಕೆ ಟಾಟಾ ವಿಸ್ತಾ/ಇಂಡಿಗೋ/ಇಟಿಯೋಸ್/ಜೆಸ್ಟ್/ಸಿಫ್ಟ್ ಡಿಸೇರ್</u> 2015** ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು.

**2.0 ಅರ್ಹತೆಗಳು :**

2.1 ಎಲ್ಲಾ ಅರ್ಜಿ ಮೂಲಗಳವರಿಗೂ ದರಪಟ್ಟಿ ದಸ್ತಾವೇಜು ಸಲ್ಲಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ.

2.2 ಗುತ್ತಿಗೆ ಪಡೆದುಕೊಳ್ಳಲು ಅರ್ಹರಾಗಬೇಕಾದರೆ ಪರಿಣಾಮಕಾರಿಯಾಗಿ ಕೆಲಸ/ ಕಾರ್ಯ ನಿರ್ವಹಿಸಲು ಬೇಕಾದ ಸಾಮರ್ಥ್ಯ ಅಗತ್ಯ ಸಂಪನ್ಮೂಲಗಳಿರುವುದರ ಬಗ್ಗೆ ದಾಖಲೆ, ಪುರಾವೆಗಳನ್ನು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಒದಗಿಸತಕ್ಕದ್ದು. ಈ ಕಾರಣದಿಂದಾಗಿ ದರಪಟ್ಟಿ, ದಸ್ತಾವೇಜು ಸಲ್ಲಿಸುವುದರ ಪ್ರಸ್ತಾವನೆಗಳಲ್ಲಿ ಕೆಳಗೆ ನಮೂದಿಸಿರುವ ಮಾಹಿತಿಗಳನ್ನು ಪೂರೈಕೆ ಮಾಡತಕ್ಕದ್ದು.

ಅ) ಕಾಮಗಾರಿಗೆ ದರಪಟ್ಟಿ : ದಸ್ತಾವೇಜು ಸಲ್ಲಿಸುವವರು ಹಾಲಿ ವಾಹನ ಹೊಂದಿದ್ದಲ್ಲಿ, ಸಾಗಾಣಿಕೆಗೆ ಬಳಸುವ ವಾಹನದ ಆರ್.ಸಿ. ಪುಸ್ತಕದ ನಕಲು ಪ್ರತಿ ಹಾಗೂ ಸಂಬಂಧಪಟ್ಟ ಅಗತ್ಯ ದಾಖಲೆಗಳನ್ನು ದರಪಟ್ಟಿ – ದಸ್ತಾವೇಜಿನೊಂದಿಗೆ ಲಗತ್ತಿಸತಕ್ಕದ್ದು.

ಹಾಲು ಶೇಖರಣೆ ವಾಹನಗಳು 2010 ಇಸವಿಯ ಅಥವಾ ನಂತರದ ಮಾಡೆಲ್ ಆಗಿರಬೇಕು, ಟಾಟಾ ವಿಸ್ತಾ/ಇಂಡಿಗೋ/ಇಟಿಯೋಸ್/ಜೆಸ್ಟ್/ಸಿಫ್ಟ್ ಡಿಸೇರ್ ಕಾರುಗಳು ಹಳದಿ ಬೋರ್ಡ್ ಹೊಂದಿದ್ದು 2015 ರ ಅಥವಾ ನಂತರದ ಮಾಡಲ್ ಆಗಿರಬೇಕು.

**ಹುಲ್ಲಿನ ಬೀಜ/ಪಶುಮೇವು ಸರಬರಾಜು/ಸಾಗಾಣಿಕೆ ವಾಹನ:– 2010 ಅಥವಾ ನಂತರದ ಮಾದರಿ ಶಿವಮೊಗ್ಗ ಡೈರಿಯಿಂದ ಹುಲ್ಲಿನ ಬೀಜ/ಉಗ್ರಾಣ ಸಾಮಾಗ್ರಿಗಳನ್ನು ಅವಶ್ಯಕತೆ ಇದ್ದಾಗ ಮಾತ್ರ ಒಕ್ಕೂಟದ ವ್ಯಾಪ್ತಿಯ ಮೂರು ಜಿಲ್ಲೆಗಳ ಸಂಘಗಳಿಗೆ/ಉಗ್ರಾಣಗಳಿಗೆ ಸಾಗಾಣಿಕೆ ಮಾಡುವುದು.**

ಟೆಂಡರ್ ಸಲ್ಲಿಸುವವರ ಹೆಸರಿಗೆ ವಾಹನದ ದಾಖಲಾತಿಗಳಿರಬೇಕು. ಹಾಲಿ ವಾಹನ ಹೊಂದಿಲ್ಲದವರು ಸಹ ಟೆಂಡರ್ ಹಾಕಲು ಅರ್ಹರಿದ್ದು, ಆದರೆ ಟೆಂಡರ್ ದರ ಒಪ್ಪಿಗೆಯಾದ 45 ದಿನಗಳೊಳಗಾಗಿ ನಿಗದಿಪಡಿಸಿದ ಮಾದರಿಯ ನಿಗದಿತ ಸಾಮರ್ಥ್ಯದ ವಾಹನ ಒದಗಿಸತಕ್ಕದ್ದು. ವಾಹನ ಒದಗಿಸಲು ವಿಫಲರಾದಲ್ಲಿ ಅಂತಹವರ ಇ.ಎಂ.ಡಿ.ಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**3.0 ದರಪಟ್ಟಿ – ದಸ್ತಾವೇಜು ಸಲ್ಲಿಕೆ ವೆಚ್ಚ :**

3.1 ದರಪಟ್ಟಿ – ದಸ್ತಾವೇಜು ಸಲ್ಲಿಕೆಗೆ ಸಂಬಂಧಿಸಿದಂತೆ ಪೂರ್ವಭಾವಿ ಸಿದ್ಧತೆ, ಪ್ರಸ್ತಾವನೆ ಸಿದ್ಧಪಡಿಸುವುದು ಇವೇ ಮುಂತಾದುವಕ್ಕೆ ತಗಲುಬಹುದಾದ ಎಲ್ಲಾ ವೆಚ್ಚವನ್ನು ದರಪಟ್ಟಿ – ದಸ್ತಾವೇಜು ಸಲ್ಲಿಕೆದಾರರೇ ಭರಿಸತಕ್ಕದ್ದು ದರಪಟ್ಟಿ – ದಸ್ತಾವೇಜು ಸಲ್ಲಿಕೆ ಪ್ರಕ್ರಿಯೆ, ನಿರ್ವಹಣೆ ಹಾಗೂ ಫಲಿತಾಂಶದ ಪರಿಣಾಮಕ್ಕೆ ಸಂಬಂಧಿಸಿದಂತೆ, ಶಿವಮೊಗ್ಗ ಹಾಲು ಒಕ್ಕೂಟವು ಯಾವುದೇ ಕಾರಣಕ್ಕೂ ಜವಾಬ್ದಾರರಲ್ಲ.

**4.0 ಮಾರ್ಗ ಪರಿಶೀಲನೆಗೆ ಭೇಟಿ :**

4.1 ದರಪಟ್ಟಿ – ದಸ್ತಾವೇಜು ಸಲ್ಲಿಸುವವರು, ತಾವು ಹಾಲು ಸಂಗ್ರಹಣೆ ಮಾಡಬೇಕಾಗಿರುವ ಮಾರ್ಗವನ್ನು ಪರಿಶೀಲಿಸಲು, ವೈಯಕ್ತಿಕ ಜವಾಬ್ದಾರಿಯ ಮೇಲೆ ಭೇಟಿ ನೀಡತಕ್ಕದ್ದು. ಅಧ್ಯಯನ ನಡೆಸತಕ್ಕದ್ದು, ದೊರೆಯುವ ಎಲ್ಲಾ ಮಾಹಿತಿಯನ್ನು ಗಮನದಲ್ಲಿರಿಸಿಕೊಂಡು ಅದರ ಆಧಾರದ ಮೇಲೆಯೇ ದರಪಟ್ಟಿ – ದಸ್ತಾವೇಜು ಸಿದ್ಧಪಡಿಸತಕ್ಕದ್ದು ಹಾಗೂ ಗುತ್ತಿಗೆದಾರನಾಗಿ ಪ್ರವೇಶ ಪಡೆಯತಕ್ಕದ್ದು.

**5.0 ದರಪಟ್ಟಿ – ದಸ್ತಾವೇಜು ನಿರ್ದೇಶನಗಳು :**

5.1 ದರಪಟ್ಟಿ – ದಸ್ತಾವೇಜುದಾರರು ತಾವು ಸಲ್ಲಿಸಬೇಕಾಗಿರುವ ದರಪಟ್ಟಿ – ದಸ್ತಾವೇಜು ಕುರಿತಂತೆ ನಿರ್ದೇಶಿಸಲಾಗಿರುವ ಎಲ್ಲಾ ನಿಯಮ ನಿಬಂಧನೆಗಳನ್ನು ಎಚ್ಚರಿಕೆಯಿಂದ ಪರೀಕ್ಷಿಸತಕ್ಕದ್ದು, ದರಪಟ್ಟಿ – ದಸ್ತಾವೇಜು ಸಲ್ಲಿಸಲು ಅಗತ್ಯವಾದ ಎಲ್ಲಾ ಅಧಿಕೃತ ಮಾಹಿತಿಗಳು, ದಾಖಲೆಗಳು ದರಪಟ್ಟಿ – ದಸ್ತಾವೇಜಿನೊಂದಿಗೆ ಲಗತ್ತಿಸತಕ್ಕದ್ದು ಹಾಗಲ್ಲದೆ ಪೂರ್ಣ ಮಾಹಿತಿ ನೀಡುವಲ್ಲಿ ವಿಫಲವಾದರೆ ದರಪಟ್ಟಿ – ದಸ್ತಾವೇಜನ್ನು ತಿರಸ್ಕರಿಸಲಾಗುತ್ತದೆ.

**6.0 ದರಪಟ್ಟಿ – ದಸ್ತಾವೇಜು ಸಲ್ಲಿಕೆ ಬೆಲೆ :**

6.1 ದರಪಟ್ಟಿ ಆಹ್ವಾನಿಸಿದ ಸಂದರ್ಭದಲ್ಲಿ ನಿಖರವಾಗಿ ಸೂಚಿಸಲಾಗಿರುವ ನಿಯಮ ನಿಬಂಧನೆಯಂತೆ ದರಪಟ್ಟಿ – ದಸ್ತಾವೇಜಿನ ಪರಿಶಿಷ್ಟ ಗುತ್ತಿಗೆಯ ಪೂರ್ಣ ಅವಧಿಗೆ ಎಂದಿರುವುದನ್ನು ದರಪಟ್ಟಿ – ದಸ್ತಾವೇಜುದಾರರು ಸ್ಪಷ್ಟ ಮಾತಿನಿಂದ ದರಪಟ್ಟಿ – ದಸ್ತಾವೇಜಿನಲ್ಲಿ ಖಚಿತವಾಗಿ ದಾಖಲಿಸತಕ್ಕದ್ದು, ಹಾಗಲ್ಲದೆ ಬೇರೆ ರೀತಿ ಇರತಕ್ಕದ್ದಲ್ಲ.

**7.0 ನಿಗದಿತ ದರ :**

7.1 ದಾಖಲೆಗೊಂಡ ದರ : ದರಪಟ್ಟಿ – ದಸ್ತಾವೇಜುದಾರನೊಂದಿಗೆ ಸಂಧಾನಗೊಂಡ ನಿಗದಿತ ದರ, ಗುತ್ತಿಗೆಯ ಪೂರ್ಣ ಅವಧಿಯಲ್ಲಿ ಜಾರಿಯಲ್ಲಿರತಕ್ಕದ್ದು, ಯಾವುದೇ ಕಾರಣಕ್ಕಾಗಿ ಯಾವುದೇ ಬಾಬ್ತಿನಲ್ಲಿ ಹೆಚ್ಚಳ ಆಗುವುದಕ್ಕೆ ಅವಕಾಶ ಇರುವುದಿಲ್ಲ ಹಾಗೂ ಅಂತಹ ವ್ಯತ್ಯಯವನ್ನು ಪರಿಗಣಸದೆ ಜೊತೆಗೆ ತಿರಸ್ಕರಿಸಲಾಗುವುದು. ಕೆಲವು ವಿಶೇಷ ಸಂದರ್ಭಗಳಲ್ಲಿ ನಿಗದಿತ ದರವನ್ನು ಪರಿಷ್ಕರಿಸಲು ಗುತ್ತಿಗೆದಾರರು ಮನವಿ ನೀಡಿದಲ್ಲಿ ಸದರಿ ಮನವಿಯನ್ನು ಸಂದರ್ಭಕ್ಕನುಗುಣವಾಗಿ ಪರಿಗಣಿಸಬಹುದಾಗಿದೆ. ಆದರೆ ಈ ವಿಷಯದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ನಿರ್ವಾಹಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿರುತ್ತದೆ.

7.2 ಗುತ್ತಿಗೆದಾರರು ನಮೂದಿಸುವ ದರವು ಎಲ್ಲಾ ತೆರಿಗೆಗಳನ್ನು ರಾಜ್ಯ/ಕೇಂದ್ರ ಸರ್ಕಾರದ ಟೋಲ್ ಫೀ (ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕ), ವೃತ್ತಿ ತೆರಿಗೆ, ಮುಂತಾದವುಗಳನ್ನು ಒಳಗೊಂಡಿರಬೇಕು.

7.3 ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್) ವೇತನ/ ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**8.0 ದರಪಟ್ಟಿ – ದಸ್ತಾವೇಜಿನ ಸಿಂಧುತ್ವ :**

8.1 ದರಪಟ್ಟಿ – ದಸ್ತಾವೇಜಿನ ಸಲ್ಲಿಕೆ, ಅಂಗೀಕಾರಗೊಂಡಿರುವ ರೀತ್ಯಾ ದರಪಟ್ಟಿ ತೆರೆಯುವ ಪ್ರಕ್ರಿಯೆಯ ದಿನಾಂಕದಿಂದ 60 ದಿನಗಳು ಮಾತ್ರ ಅದರ ಸಿಂಧುತ್ವ ಊರ್ಜಿತವಾಗಿರುತ್ತದೆ.

8.2 ಕೆಲವಾರು ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ದರಪಟ್ಟಿ – ದಸ್ತಾವೇಜಿನ ಸಿಂಧುತ್ವ ಅವಧಿ ಮುಕ್ತಾಯಗೊಳ್ಳುವ ಮುನ್ನ ಶಿವಮೊಗ್ಗ ಹಾಲು ಒಕ್ಕೂಟವು ದರ ಪಟ್ಟಿದಾರರನ್ನು ನಿಗದಿತ ಸಿಂಧುತ್ವ ಅವಧಿಯನ್ನು ವಿಸ್ತರಿಸಬಹುದಾಗಿದೆ. ವಿಸ್ತರಣೆ ಕೋರಿಕೆಯನ್ನು ಬರವಣಿಗೆಯಲ್ಲಿ, ತಂತಿ ಸಂದೇಶದ ಮೂಲಕ ದೂರವಾಣಿ ಸಂಪರ್ಕದ ಮೂಲಕ ಮಾಡಬಹುದಾಗಿದೆ. ಆದರೆ ದರಪಟ್ಟಿ – ದಸ್ತಾವೇಜು ಸಲ್ಲಿಕೆ ಸಂದರ್ಭದಲ್ಲಿ ಒದಗಿಸಲಾಗಿದ್ದ ಆಧಾರ ನೀಡಿಕೆಯನ್ನು (ಭದ್ರತಾ ಠೇವಣಿಯನ್ನು) ಅದಕ್ಕನುಗುಣವಾಗಿ ವಿಸ್ತರಿಸಲು ಗುತ್ತಿಗೆದಾರರಿಗೆ ತಿಳಿಸಬಹುದಾಗಿರುತ್ತದೆ.

**9.0 ದರಪಟ್ಟಿ – ದಸ್ತಾವೇಜು ಸಲ್ಲಿಕೆಗೆ ಆಧಾರ ನೀಡಿಕೆ :**

9.1 ದರಪಟ್ಟಿದಾರ ದರಪಟ್ಟಿ – ದಸ್ತಾವೇಜು ಸಲ್ಲಿಕೆ ನಿಯಮದಡಿ ಸಾಗಾಣಿಕೆ ಕಾಮಗಾರಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ–ಪ್ರೋಕ್ಯೂರ್‌ಮೆಂಟ್ ನಿಯಮಾವಳಿಯಂತೆ ಆಧಾರ ನೀಡಿಕೆ (ಇ.ಎಂ.ಡಿ.) ಒದಗಿಸತಕ್ಕದ್ದು. ಹಾಲು ಶೇಖರಣೆ, ವಾಹನಗಳಿಗೆ ಅವುಗಳ ಮುಂದೆ ತಿಳಿಸಿದಂತೆ ಇ.ಎಂ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ನಿಯಮಾವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಸಲ್ಲಿಸಿದ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

9.2 ಆಧಾರ ನೀಡಿಕೆ ಮೊತ್ತವನ್ನು (ಇ.ಎಂ.ಡಿ.ಮೊತ್ತವನ್ನು) ಟೆಂಡರ್ ಪ್ರಕಟಣೆಯಲ್ಲಿ ಪ್ರಕಟಿಸಿದಂತೆ ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿಯಂತೆ ಸಲ್ಲಿಸುವುದು.

9.3 ದರಪಟ್ಟಿ – ದಸ್ತಾವೇಜುದಾರ ಪ್ರತಿ ಮಾರ್ಗದ ಸಾಗಾಣಿಕೆ ಕಾಮಗಾರಿಗೂ ಪ್ರತ್ಯೇಕ ದರಪಟ್ಟಿ – ದಸ್ತಾವೇಜು ಸಲ್ಲಿಸತಕ್ಕದ್ದು.

9.4 ಯಾವುದೇ ದರಪಟ್ಟಿ ಸಲ್ಲಿಕೆಯ ಜೊತೆ ನಿಗಧಿತ ಆಧಾರ (ಇ.ಎಂ.ಡಿ.) ನೀಡಿಕೆ ಇರದಿದ್ದರೆ ಅಥವಾ ನಿಗದಿತ ಮೊತ್ತಕ್ಕಿಂತ ಕಡಿಮೆ ಇದ್ದರೆ ಅಂತಹ ದರಪಟ್ಟಿ – ದಸ್ತಾವೇಜನ್ನು ಶಿವಮೊಗ್ಗ ಹಾಲು ಒಕ್ಕೂಟವು ತಿರಸ್ಕರಿಸುತ್ತದೆ.

9.5 ಅಂಗೀಕಾರ ಆಗದ ದರಪಟ್ಟಿದಾರರಿಗೆ ಅವರು ಸಲ್ಲಿಸಿರುವ ಆಧಾರ (ಇ.ಎಂ.ಡಿ.) ಮೊತ್ತವನ್ನು ಆದಷ್ಟು ಶೀಘ್ರವಾಗಿ ಪ್ರಾಮಾಣಿಕವಾಗಿ ಹಿಂತಿರುಗಿಸಲಾಗುವುದು. ಅಂದರೆ ಅದು ನಮ್ಮ ದಸ್ತಾವೇಜಿನಲ್ಲಿ ಪ್ರಕಟಿಸಿರುವಂತೆ ದರಪಟ್ಟಿಯ ಸಿಂಧುತ್ವದ ನಿಗದಿತ ಅವಧಿಯ ನಂತರದ 30 ದಿನಗಳೊಳಗಾಗಿ

9.6 ಅಂಗೀಕಾರ ಆಗುವ ದರಪಟ್ಟಿದಾರರಿಗೆ, ಅವರು ಸಲ್ಲಿಸಿರುವ ಆಧಾರ ಮೊತ್ತವನ್ನು ಒಪ್ಪಂದಕ್ಕೆ ಸಹಿ ಹಾಕಿದಾಗ ಹಾಗೂ ಅಗತ್ಯವಾದ ಕಾರ್ಯ ನಿರ್ವಹಣಾ ಪ್ರಮಾಣ ಪತ್ರವನ್ನು ಒದಗಿಸಿದಾಗ ಹಿಂತಿರುಗಿಸಲಾಗುವುದು.

9.7 ದರಪಟ್ಟಿದಾರ ಸಲ್ಲಿಸಿರುವ ಇ.ಎಂ.ಡಿ./ಆಧಾರ ಮೊತ್ತಕ್ಕೆ ಬಡ್ಡಿಯನ್ನು ಶಿವಮೊಗ್ಗ ಹಾಲು ಒಕ್ಕೂಟ ಪಾವತಿಸುವುದಿಲ್ಲ.

10.0 ದರಪಟ್ಟಿದಾರ ಸಲ್ಲಿಸುವ ಇ.ಎಂ.ಡಿ./ಆಧಾರ ಮೊತ್ತವನ್ನು ಕೆಳಕಂಡ ಸಂಧರ್ಭಗಳಲ್ಲಿ ಮುಟ್ಟುಗೋಲು ಹಾಕಿಕೊಳ್ಳಬಹುದು.

10.1 ದರಪಟ್ಟಿ ಸಲ್ಲಿಕೆ ಸಿಂಧುತ್ವದ ಅವಧಿಯಲ್ಲಿ ತನ್ನ ದರಪಟ್ಟಿಯನ್ನು ಹಿಂದಕ್ಕೆ ಪಡೆದಿದ್ದೇ ಆದರೆ

10.2 ಅಂಗೀಕಾರ ಆದ ಕಾರಣ ದರಪಟ್ಟಿದಾರನು ನಿಗದಿತ ಕಾಲಾವಧಿಯಲ್ಲಿ

ಅ) ಠೇವಣಿ ಹಣ ಪಾವತಿಸಿ ಒಪ್ಪಂದಕ್ಕೆ ಸಹಿ ಮಾಡದೇ ಇದ್ದರೆ

**ಅಥವಾ**

ಆ) ಅಗತ್ಯ ಕಾರ್ಯ ನಿರ್ವಹಣಾ ಭರವಸಾ ಪತ್ರ ನೀಡದಿದ್ದರೆ ಅಥವಾ ನಿಗಧಿತ ಅವಧಿಯೊಳಗೆ ನಿಗಧಿಪಡಿಸಿದ ಸಾಮರ್ಥ್ಯದ ವಾಹನ ಒದಗಿಸದಿದ್ದರೆ,

**11.0 ದಸ್ತಾವೇಜು ಮಾದರಿ ಹಾಗೂ ದರಪಟ್ಟಿಗೆ ಸಹಿ ಮಾಡುವುದು :**

11.1 ದರಪಟ್ಟಿ ಸಲ್ಲಿಕೆಗೆ ಸಂಬಂಧಿಸಿದಂತೆ ತಾನು ಖರೀದಿಸಿದ ದಸ್ತಾವೇಜು ಮಾದರಿ, ಅದನ್ನು ಸಿದ್ದಪಡಿಸಿ ಅಧಿಕೃತ ಮೂಲ ದಾಖಲೆಗಳೊಂದಿಗೆ ಪ್ರಸ್ತಾವನೆ ಸಲ್ಲಿಸುವುದು.

11.2 ದರಪಟ್ಟಿ ಸಲ್ಲಿಕೆಗೆ ಸಂಬಂಧಿಸಿದ ದಸ್ತಾವೇಜಿನ ಎಲ್ಲಾ ಪುಟಗಳಲ್ಲಿ ಅಧಿಕೃತವಾಗಿ ನಾಮ ನಿರ್ದೇಶನಗೊಂಡ ಗುತ್ತಿಗೆ ವ್ಯಕ್ತಿ ಸಹಿ ಮಾಡತಕ್ಕದ್ದು, ದಸ್ತಾವೇಜಿನ ಎಲ್ಲಾ ಪುಟಗಳಲ್ಲಿ ಹಾಗೂ ತಿದ್ದುಪಡಿ ಮಾಡಿದ ಕಡೆಗಳಲ್ಲೆಲ್ಲಾ ಭರ್ತಿಮಾಡಿದ ವ್ಯಕ್ತಿ ಅಥವಾ ನಾಮನಿರ್ದೇಶನಗೊಂಡ ವ್ಯಕ್ತಿ ಆತನ ಹೆಸರಿನ ಅಧ್ಯ–ಅಕ್ಷರದಲ್ಲಿ ಸಹಿಯನ್ನು ಹೆಚ್ಚುವರಿಯಾಗಿ ಮಾಡತಕ್ಕದ್ದು.

11.3 ದರಪಟ್ಟಿಯ ಪೂರ್ಣ ದಸ್ತಾವೇಜಿನಲ್ಲಿ ಯಾವುದೇ ಬದಲಾವಣೆ ಮಾಡತಕ್ಕದ್ದಲ್ಲ. ಹಾಗೂ ಅಳಿಸತಕ್ಕದ್ದಲ್ಲ. ಆದರೆ ಶಿವಮೊಗ್ಗ ಹಾಲು ಒಕ್ಕೂಟ ನೀಡಬಹುದಾದ ಸೂಚನೆಗಳಿಗೆ ಈ ಕಟ್ಟುಪಾಡು ಅನ್ವಯಿಸುವುದಿಲ್ಲ ಅಥವಾ ದರಪಟ್ಟಿದಾರ ಅಕಸ್ಮಾತಾಗಿ ಮಾಡಿರಬಹುದಾದ ತಪ್ಪುಗಳನ್ನು ಅಗತ್ಯವಾಗಿ ಸರಿಪಡಿಸಬಹುದಾಗಿರುತ್ತದೆ. ಅಂತಹ ಸಂದರ್ಭಗಳಲ್ಲಿ ದಸ್ತಾವೇಜಿನಲ್ಲಿ ಸಹಿ ಮಾಡುವ ಅಧಿಕೃತ ದರಪಟ್ಟಿದಾರ ತನ್ನ ಹೆಸರಿನ ಅಧ್ಯ–ಅಕ್ಷರಗಳ ಸಹಿ ಮಾಡತಕ್ಕದ್ದು, ಬರವಣಿಗೆಯ ಮೇಲೆ ಬರವಣಿಗೆ ಮಾಡಲು ಅನುಮತಿ ಇರುವುದಿಲ್ಲ.

**12.0 ಮೊಹರು ಮಾಡುವುದು ಹಾಗೂ ದರಪಟ್ಟಿ ಸಿದ್ಧಪಡಿಸುವುದು :**

12.1 ದರಪಟ್ಟಿ ಸಲ್ಲಿಕೆದಾರ ಈ ಸಂಬಂಧದ ತಾಂತ್ರಿಕ ಮತ್ತು ವಾಣಿಜ್ಯ ದಸ್ತಾವೇಜನ್ನು ಪ್ರತ್ಯೇಕವಾಗಿ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಅಪ್‌ಲೋಡ್ ಮಾಡತಕ್ಕದ್ದು. ಮಾರ್ಗದ ಹೆಸರು ಮತ್ತು ಸಂಖ್ಯೆಯನ್ನು ಸ್ಪಷ್ಟ ಅಕ್ಷರಗಳಲ್ಲಿ ಬರಯತಕ್ಕದ್ದು.

12.2 ಯಾವ ಮಾರ್ಗಕ್ಕೆ ಟೆಂಡರ್ ಅರ್ಜಿ ಸಲ್ಲಿಸಲಾಗಿದೆ ಎಂದು ಸ್ಪಷ್ಟವಾಗಿ ನಮೂದಿಸದಿದ್ದರೆ ಶಿವಮೊಗ್ಗ ಹಾಲು ಒಕ್ಕೂಟವು ಖಚಿತ ಮಾಹಿತಿ ಇಲ್ಲದೆ ಬೇರೆಲ್ಲಿಯೋ ತಪ್ಪಾಗಿ ಇರಿಸಲಾಗುವ ಹಾಗು ದರಪಟ್ಟಿ ತೆರೆಯಬೇಕಾದ ನಿಗದಿತ ದಿನಾಂಕಕ್ಕಿಂತಲೂ ಮುಂಚಿತವಾಗಿ ತೆರೆದ ತಪ್ಪುಗಳಿಗೆ ಹೊಣೆಯಾಗಲಾರದು. ಈ ರೀತಿ ಮಾರ್ಗದ ಹೆಸರು ನಮೂದಿಸದೆ ಇರುವ ಟೆಂಡರ್ ಅರ್ಜಿಯನ್ನು ಶಿವಮೊಗ್ಗ ಹಾಲು ಒಕ್ಕೂಟವು ತಿರಸ್ಕರಿಸುತ್ತದೆ.

**13.0 ದರಪಟ್ಟಿ ಸಲ್ಲಿಕೆಗೆ ಅಂತಿಮ ದಿನಾಂಕ ಪ್ರಕಟಣೆ :**

13.1 ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭ ನಿಗದಿಪಡಿಸಿದ ದಿನಾಂಕ ಹಾಗೂ ವೇಳೆಯೊಳಗೆ ಸಂಬಂಧಪಟ್ಟ ದಸ್ತಾವೇಜನ್ನು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಅಪ್‌ಲೋಡ್ ಮಾಡುವುದು. ಟೆಂಡರ್‌ದಾರರ ಜವಾಬ್ದಾರಿಯಾಗಿರುತ್ತದೆ.

13.2 ಶಿವಮೊಗ್ಗ ಹಾಲು ಒಕ್ಕೂಟವು ತನ್ನ ವಿವೇಚನೆಗೆ ಅಗತ್ಯ ಕಂಡು ಬಂದರೆ ಟೆಂಡರ್‌ನಲ್ಲಿ ಪ್ರಕಟಿಸಿದ ಅಂತಿಮ ದಿನಾಂಕವನ್ನು ಮುಂದೂಡಬಹುದಾಗಿರುತ್ತದೆ. ನಂತರ ತಿದ್ದುಪಡಿ ದಿನಾಂಕವನ್ನು ಪ್ರಕಟಿಸಲು ಶಿವಮೊಗ್ಗ ಹಾಲು ಒಕ್ಕೂಟವು ಹಾಗೂ ದರಪಟ್ಟಿದಾರರ ನಡುವಣ ತನ್ನ ಹಕ್ಕು ಹಾಗೂ ಬಾಧ್ಯತೆಯಿಂದ ಹಿಂದೆ ಪ್ರಕಟಿಸಿದ ಮೂಲ ಕೊನೆಯ ದಿನಾಂಕದ ಸಿಂಧುತ್ವವನ್ನು ರದ್ದುಗೊಳಿಸಿ, ಮುಂದೂಡಿದ ಹೊಸ ಅಂತಿಮ ದಿನಾಂಕವನ್ನು ಪ್ರಕಟಿಸಿ ಸಿಂಧುಗೊಳಿಸಬಹುದಾಗಿರುತ್ತದೆ.

**14.0 ತಡವಾಗಿ ಸಲ್ಲಿಕೆಯಾಗುವ ದರಪಟ್ಟಿ ದಸ್ತಾವೇಜುಗಳು :**

14.1 ಶಿವಮೊಗ್ಗ ಹಾಲು ಒಕ್ಕೂಟವು ಅಂತಿಮ ದಿನಾಂಕ ಹಾಗೂ ವೇಳೆ ಮೀರಿ ತಲುಪುವ ಯಾವುದೇ ದರಪಟ್ಟಿ ದಸ್ತಾವೇಜುಗಳನ್ನು ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭದಲ್ಲಿ ಪ್ರಕಟಿಸಲಾದ ಅಂತಿಮ ದಿನಾಂಕ ಹಾಗೂ ವೇಳೆಯನ್ನು ಪರಿಗಣಿಸಿ ಹಾಗೂ ಕಾನೂನು ನಿಯಮದ ಹಿನ್ನೆಲೆಯಲ್ಲಿ ಅವುಗಳನ್ನು ತೆರೆಯಲಾಗುವುದಿಲ್ಲ.

**15.0 ದರಪಟ್ಟಿ ದಸ್ತಾವೇಜು ತೆರೆಯುವ ಕ್ರಮ :**

15.1 ಶಿವಮೊಗ್ಗ ಹಾಲು ಒಕ್ಕೂಟವು ದರಪಟ್ಟಿ ದಸ್ತಾವೇಜು ಸಲ್ಲಿಸಿದ ಎಲ್ಲಾ ದರಪಟ್ಟಿದಾರರ ಪ್ರತಿನಿಧಿಗಳ ಸಮ್ಮುಖದಲ್ಲಿ ದರಪಟ್ಟಿ ದಸ್ತಾವೇಜಿನ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುತ್ತದೆ. ಅದೂ ಕೂಡ ದರಪಟ್ಟಿದಾರರು ಶಿವಮೊಗ್ಗ ಹಾಲು ಒಕ್ಕೂಟದೊಂದಿಗೆ ಸಂಪರ್ಕ ಏರ್ಪಡಿಸಿಕೊಂಡು ಆಯ್ಕೆ ಮಾಡಿಕೊಳ್ಳುವ ಕಛೇರಿಯ ವೇಳೆಯಲ್ಲಿಯೇ ಜೊತೆಗೆ ದರಪಟ್ಟಿ ಸಲ್ಲಿಕೆಗೆ ಆಹ್ವಾನಿಸಿದ ಸಂದರ್ಭದಲ್ಲಿ ಸೂಚಿಸಲಾಗಿದ್ದ ಅಂತಿಮ ದಿನಾಂಕ ಹಾಗೂ ವೇಳೆಗೆ ಅನುಗುಣವಾಗಿ ಈ ಪ್ರಕ್ರಿಯೆ ನಡೆಯುತ್ತದೆ. ಹಾಜರಾದ ದರಪಟ್ಟಿ ಸಲ್ಲಿಕೆದಾರರು ಅಥವಾ ಅವರ ಪ್ರತಿನಿಧಿಗಳು ಕಛೇರಿಯ ಕಡತದಲ್ಲಿ ತಮ್ಮ ಹಾಜರಾತಿಯನ್ನು ದೃಢೀಕರಿಸಲು ಹಾಜರಾತಿಗೆ ಸಹಿ ಹಾಕಬೇಕಾಗುತ್ತದೆ.

**16.0 ಜವಾಬ್ದಾರಿಯುತವಾಗಿ ಸಲ್ಲಿಕೆಯಾಗಿರುವ ಕುರಿತು ನಿರ್ಧಾರ :**

16.1 ದರಪಟ್ಟಿ ದಸ್ತಾವೇಜಿನ ವಿವರ ಮೌಲ್ಯಮಾಪನಕ್ಕೆ ಪೂರ್ವಭಾವಿಯಾಗಿ ಪ್ರತಿಯೊಂದು ದರಪಟ್ಟಿ ದಸ್ತಾವೇಜುಗಳು ಎಲ್ಲಾ ರೀತಿಯಿಂದಲೂ ಅಗತ್ಯಕ್ಕೆ ತಕ್ಕಂತೆ ಜವಾಬ್ದಾರಿಯುತವಾಗಿ ಸಲ್ಲಿಕೆ ಆಗಿದೆಯೇ ಎಂದು ನಿರ್ಧಾರ ಕೈಗೊಳ್ಳಲು ಶಿವಮೊಗ್ಗ ಹಾಲು ಒಕ್ಕೂಟವು ಮುಂದಾಗುತ್ತದೆ.

16.2 ನಿಯಮದ ರೀತ್ಯಾ ಇಂತಹ ನಿರ್ಧಾರ ಕೈಗೊಳ್ಳಲು ಎಲ್ಲಾ ರೀತಿಯಿಂದಲೂ ಜವಾಬ್ದಾರಿಯುತವಾಗಿ ಸಲ್ಲಿಕೆಯಾಗಿರುವ ದರಪಟ್ಟಿ ದಸ್ತಾವೇಜು ಎಂದು ಪರಿಗಣಿತವಾಗಲು ಅದು ವಿಧಿಸಲಾಗಿರುವ ನೀತಿ, ನಿಯಮಗಳಿಗೆ ವಿವರ ಮಾಹಿತಿಗೆ ಬದ್ಧವಾಗಿದ್ದು, ಯಾವುದೇ ರೀತಿಯಿಂದಲೂ ವ್ಯತ್ಯಯಗೊಳ್ಳದ ಹಾಗೂ ಕಾಯ್ದಿರಿಸಿದ ರೀತಿಯದ್ದಾಗಿರಬೇಕು. ವ್ಯತ್ಯಯ ಅಥವಾ ಕಾಯ್ದಿರಿಸುವಿಕೆಯಿಂದಾಗಿ ಅದರ ಆಶಯ ಅಥವಾ ಗುತ್ತಿಗೆಯ ಕಾರ್ಯವೈಖರಿಯ ಮೇಲೆ ದುಷ್ಪರಿಣಾಮ ಬೀರುತ್ತದೆ. ಅಥವಾ ಕೆಲದೃಷ್ಟಿಯ ಇತಿಮಿತಿಗೊಳ್ಳುತ್ತದೆ. ಜೊತೆಗೆ ದರಪಟ್ಟಿ ದಸ್ತಾವೇಜಿನೊಂದಿಗೆ ಅಸಂಗತಗೊಳ್ಳುತ್ತದೆ. ಶಿವಮೊಗ್ಗ ಹಾಲು ಒಕ್ಕೂಟವು ಹಕ್ಕು ಅಥವಾ ದರಪಟ್ಟಿದಾರರ ಗುತ್ತಿಗೆ ಬಾಧ್ಯತೆ ಇವುಗಳ ಸುಧಾರಣೆ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ವ್ಯತ್ಯಯ ಹಾಗೂ ಕಾಯ್ದಿರಿಸುವಿಕೆ ಇತರೆ ಸ್ಪರ್ಧಾತ್ಮಕ ದರಪಟ್ಟಿದಾರರ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಹಾಗಾಗಿ ಎಲ್ಲಾ ರೀತಿಯಿಂದಲೂ ಜವಾಬ್ದಾರಿಯುತ ದರಪಟ್ಟಿ ದಸ್ತಾವೇಜಿನ ಸಲ್ಲಿಕೆ ಆಗಬೇಕಾಗಿದೆ.

16.3 ದರಪಟ್ಟಿ ದಸ್ತಾವೇಜಿನ ಅಗತ್ಯಕ್ಕೆ ಅನುಗುಣವಾಗಿ ಜವಾಬ್ದಾರಿಯುತ ಪ್ರತಿಕ್ರಿಯೆ ಇಲ್ಲವಾದಲ್ಲಿ ಅಂತಹವನ್ನು ಶಿವಮೊಗ್ಗ ಹಾಲು ಒಕ್ಕೂಟವು ತಿರಸ್ಕರಿಸುತ್ತದೆ. ಅನಧಿಕೃತ ವ್ಯತ್ಯಯ ಅಥವಾ ಕಾಯ್ದಿರಿಸುವಿಕೆಯನ್ನು ಸರಿಪಡಿಸಲು ಹಿಂತಿರುಗಿ ಪಡೆದುದ್ದನ್ನು ಮತ್ತೆ ಜವಾಬ್ದಾರಿಯುತಗೊಳಿಸಲಾಗುವುದಿಲ್ಲ.

17.0 ಶಿವಮೊಗ್ಗ ಹಾಲು ಒಕ್ಕೂಟ ಯಾವುದೇ ದರಪಟ್ಟಿ ದಸ್ತಾವೇಜನ್ನು ಸ್ವೀಕರಿಸುವುದಕ್ಕೂ ತಿರಸ್ಕರಿಸುವುದಕ್ಕೂ ಅಥವಾ ಎಲ್ಲವನ್ನು ಸಾರಾ ಸಗಟಾಗಿ ತಿರಸ್ಕರಿಸುವುದಕ್ಕೂ ಹಕ್ಕುಳ್ಳದ್ದಾಗಿರುತ್ತದೆ.

17.1 ಮೇಲಿನ ವಿಷಯಗಳನ್ನು ಪೂರೈಸಲಾಗದ ದಸ್ತಾವೇಜನ್ನು ಯಾವುದೇ ಸಮಯದಲ್ಲಿ ಗುತ್ತಿಗೆ ನೀಡಿಕೆಗೆ ಪೂರ್ವಭಾವಿಯಾಗಿ ತಿರಸ್ಕರಿಸುವ ಅಥವಾ ಸ್ವೀಕರಿಸುವ, ಇಲ್ಲವೇ ಪ್ರಕ್ರಿಯೇಯನ್ನೇ ರದ್ದುಪಡಿಸುವ ಹಾಗೂ ಸಾರಾಸಗಟಾಗಿ ಎಲ್ಲವನ್ನೂ ತಿರಸ್ಕರಿಸುವ ಹಕ್ಕನ್ನು ಶಿವಮೊಗ್ಗ ಹಾಲು ಒಕ್ಕೂಟ ಕಾಯ್ದಿರಿಸಿಕೊಂಡಿದೆ. ಪರಿಣಾಮಕ್ಕೆ ಗುರಿಯಾಗುವ ದರಪಟ್ಟಿದಾರರಿಗೆ ಯಾವುದೇ ರೀತಿಯ ಉಪಶಮನಕ್ಕೂ ಬದ್ಧವಾಗದೆ ಮಾಹಿತಿಯನ್ನು ನೀಡಬೇಕಾದ ಹೊಣೆಗಾರಿಕೆಯು ಇಲ್ಲದೇ ಕ್ರಮ ತೆಗೆದುಕೊಳ್ಳಲು ಶಿವಮೊಗ್ಗ ಹಾಲು ಒಕ್ಕೂಟ ಹಕ್ಕುಳ್ಳದ್ದಾಗಿದೆ.

**18.0 ಗುತ್ತಿಗೆ ನೀಡಿಕೆ :**

18.1 ದರಪಟ್ಟಿ ದಸ್ತಾವೇಜು ಹಲವು ದೃಷ್ಟಿಯಿಂದ ಜವಾಬ್ದಾರಿಯುತವಾದುದು ಎಂದು ಪರಿಗಣಿತವಾಗಿ ಕನಿಷ್ಟ ದರವನ್ನು ದರಪಟ್ಟಿಯಲ್ಲಾಗಲೀ ಅಥವಾ ಸಂಧಾನದಲ್ಲಾಗಲೀ ಸೂಚಿಸಿರುವುದರಿಂದ ಶಿವಮೊಗ್ಗ ಹಾಲು ಒಕ್ಕೂಟವು ನಿಯಮ 15 ರ ಅಡಿಯಲ್ಲಿ ದರಪಟ್ಟಿದಾರನಿಗೆ ಗುತ್ತಿಗೆ ನೀಡಬಹುದಾಗಿರುತ್ತದೆ. ಹಲವು ದೃಷ್ಟಿಯಿಂದ ಜವಾಬ್ದಾರಿಯುತವಾದವು ಎಂದು ಪರಿಗಣಿತವಾದ ದರಪಟ್ಟಿ ದಸ್ತಾವೇಜಿನ ತೌಲನಿಕ ತಃಖ್ತೆ ಮೂಲಕ ಮೌಲ್ಯಮಾಪನ ಮಾಡಲಾಗದೆ ಹಾಗೂ ಗುತ್ತಿಗೆ ಕಾಮಗಾರಿಯನ್ನು ಪರಿಣಾಮಯುತವಾಗಿ ನಿರ್ವಹಿಸಬಲ್ಲೆ ಎಂಬ ಸಾಮರ್ಥ್ಯ ಹಾಗೂ ಸಂಪನ್ಮೂಲದ ಬಗೆಗೆ ದೃಢೀಕರಣ ಒದಗಿಸಿದರೆ ಗುತ್ತಿಗೆಯನ್ನು ನೀಡಬಹುದಾಗಿರುತ್ತದೆ.

18.2 ಶಿವಮೊಗ್ಗ ಹಾಲು ಒಕ್ಕೂಟವು ನಾಮಮಾತ್ರ ಸದಸ್ಯತ್ವಕ್ಕಾಗಿ ನಿಗದಿತ ಮೊತ್ತ ಪಾವತಿಸಿದ ಅವರು / ಅವಳು ಪಡೆದುಕೊಂಡ ನಂತರ ಗುತ್ತಿಗೆಯನ್ನು ನೀಡಬಹುದಾಗಿರುತ್ತದೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**

(ದಪ್ಪ ಅಕ್ಷರಗಳಲ್ಲಿ)

# ಅನುಬಂಧ – ಸಿ

1) **ಕ್ರ.ಸಂ. 1 ರಿಂದ 10** ರ ಹಾಲು ಶೇಖರಣಾ/ವಿತರಣೆ/ಹುಲ್ಲಿನ ಬೀಜ/ಪಶುಮೇವು ಸರಬರಾಜು/ಕಾರಿನ ಮಾರ್ಗಗಳಿಗೆ ಅವುಗಳ ಮುಂದೆ ತೋರಿಸಿರುವಂತೆ ಇ.ಎಂ.ಡಿ.ಯನ್ನು ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿಯಂತೆ ಪಾವತಿಸುವುದು.

2) **ಕ್ರ.ಸಂ. 1 ರಿಂದ 10** ರವರೆಗಿನ ಮಾರ್ಗದಲ್ಲಿ ಯಾವುದೇ ಮಾರ್ಗಕ್ಕೆ ಟೆಂಡರ್ ಪಡೆದರು ಮಾರ್ಗದ ಮುಂದೆ ಸೂಚಿಸಿರುವಂತೆ ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ನಗದು/ಎಫ್.ಡಿ ಭದ್ರತಾ ಠೇವಣಿಯನ್ನು ನೀಡುವುದು.

**ವಿಶೇಷ ಸೂಚನೆ :**

1) ಟೆಂಡರ್‌ನಲ್ಲಿ ಪ್ರಕಟಿಸಿದ ಮಾದರಿಯ/ಸಾಮರ್ಥ್ಯದ ವಾಹನವುಳ್ಳವರು ಮಾತ್ರ ಪ್ರತಿ ಟೆಂಡರ್ ಅರ್ಜಿ ಜೊತೆಯಲ್ಲಿ ವಾಹನವಾರು ದಾಖಲಾತಿಗಳನ್ನು ಲಗತ್ತಿಸಿರಬೇಕು.

2) ಟೆಂಡರ್‌ನಲ್ಲಿ ಸೂಚಿಸುವ ಮಾರ್ಗ ಸಂಖ್ಯೆ **01 ರಿಂದ 5 ಮತ್ತು 6** ರ ಮಾರ್ಗಗಳಿಗೆ ಟರ್ಪಾಲ್‌ನಿಂದ ಮುಚ್ಚಿದ ವಾಹನ ಹೊಂದಿರಬೇಕು.

3) ಕ್ರ.ಸಂಖ್ಯೆ 7 ಕ್ಕೆ ಥರ್ಮಕೋಲ್ ಇನ್ಸೂಲೆಟೆಡ್ ಬಾಡಿಯುಳ್ಳ ವಾಹನ ಹೊಂದಿರಬೇಕು.

4) ಕ್ರ.ಸಂಖ್ಯೆ 8 ರಿಂದ 10 ಕ್ಕೆ 2015 ರ ಅಥವಾ ನಂತರ ಮಾದರಿಯ ಟಾಟಾವಿಸ್ತಾ /ಇಂಡಿಗೋ/ಇಟಿಯೋಸ್/ಜೆಸ್ಟ್/ಸಿಫ್ಟ್ ಡಿಸೇರ್ ಕಾರುಗಳನ್ನು ಒದಗಿಸುವುದು.

5) *ಗುತ್ತಿಗೆ ವರ್ಗಾವಣೆಗೆ ಅವಕಾಶವಿರುವುದಿಲ್ಲ. ಆದರೂ ಸಹ ಅನಿವಾರ್ಯ ಸಂದರ್ಭದಲ್ಲಿ ಆದೇಶ ಪಡೆದು ವಾಹನ ಓಡಿಸಿದ ಕನಿಷ್ಟ ಮೂರು ತಿಂಗಳ ನಂತರ ನಿಯಾಮಾನುಸಾರ ವರ್ಗಾವಣೆ ಶುಲ್ಕ ಪಾವತಿಸಿದಲ್ಲಿ ಒಂದು ಬಾರಿ ಮಾತ್ರ ಮಾಡಲಾಗುವುದು.*

6) ಈ ಟೆಂಡರ್‌ನಲ್ಲಿ ಒಂದು ಮಾರ್ಗದ ಗುತ್ತಿಗೆಯಲ್ಲಿ, ಭಾಗವಹಿಸುವ ವಾಹನ ಇನ್ನೊಂದು ಮಾರ್ಗದ ಗುತ್ತಿಗೆಯಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ಹಾಗೂ ಹಾಲಿ ಇರುವ ಗುತ್ತಿಗೆದಾರರು ಇನ್ನೂ ಟೆಂಡರ್ ಅವಧಿ ಮುಗಿಯದೇ ಇರುವ ಮಾರ್ಗಗಳಿಗೆ ನೀಡಿರುವ ವಾಹನ ದಾಖಲಾತಿಗಳನ್ನು ಈ ಟೆಂಡರಿಗೆ ಸಲ್ಲಿಸುವಂತಿಲ್ಲ.

7) **ಕ್ರ.ಸಂ. 01 ರಿಂದ 05** ರವರೆಗಿನ ಹಾಲು ಶೇಖರಣ ಮಾರ್ಗಗಳಿಗೆ **ಎರಡು ವರ್ಷದ** ಅವಧಿಗೆ ಅಥವಾ ಹಾಲು ಕಡಿಮೆಯಾಗುವವರೆಗೆ ಅಥವಾ ಬಿ.ಎಂ.ಸಿ. ಕೇಂದ್ರ ಪ್ರಾರಂಭವಾಗುವರೆಗೆ ಯಾವುದು ಮೊದಲೊ ಅಲ್ಲಿಯವರೆಗೆ ಮಾತ್ರ ವಾಹನ ಒದಗಿಸಲು ಟೆಂಡರ್ ಕರೆಯಲಾಗಿದೆ.

ಈ ಮೇಲೆ ತಿಳಿಸಿರುವಂತೆ ಟೆಂಡರ್ ದರ ಒಪ್ಪಿಗೆಯಾದಲ್ಲಿ ಆಯಾ ಮಾರ್ಗದ ಮುಂದೆ ಸೂಚಿಸಿದ ಸಾಮರ್ಥ್ಯದ ವಾಹನ ಒದಗಿಸಿ ನಿಗದಿತ ಭದ್ರತಾ ಠೇವಣಿ ನೀಡಲು ಒಪ್ಪಿರುತ್ತೇನೆ.

**ಟೆಂಡರ್‌ದಾರರ ಸಹಿ ಮತ್ತು ಹೆಸರು**
(ದಪ್ಪ ಅಕ್ಷರಗಳಲ್ಲಿ)

# ಅನುಬಂಧ – ಡಿ

## 1.0 ಗುತ್ತಿಗೆ ನಿಯಮ ನಿಬಂಧನೆಗಳು :

ಗುತ್ತಿಗೆದಾರರು ಸಾಗಾಣಿಕೆದಾರರು ಅವರಿಗೆ ಈ ಉದ್ದೇಶದಿಂದ ಒಪ್ಪಿಸಿರುವ ನಿಗದಿತ ಮಾರ್ಗಗಳಲ್ಲಿ ಹಾಲನ್ನು ಬೆಳಿಗ್ಗೆ/ಸಂಜೆ ಎರಡೂ ವೇಳೆ ಅಥವಾ ಒಕ್ಕೂಟ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ಸಾಗಾಣಿಕೆ ಮಾಡತಕ್ಕದ್ದು.

1. ದರಪಟ್ಟಿ , ದಸ್ತಾವೇಜು, ಅಂಗೀಕಾರ ಆದ ಮೇಲೆ ಗುತ್ತಿಗೆದಾರರು ಆಧಾರದ ಮೊತ್ತವಾಗಿ ಭದ್ರತಾ ಠೇವಣಿ ಇಡು ಹಣವನ್ನು ಆಯಾ ಮಾರ್ಗಗಳಿಗೆ ಸೂಚಿಸಿರುವಂತೆ ಪಾವತಿಸತಕ್ಕದ್ದು. ಈ ರೀತಿಯ ಆಧಾರ ಮೊತ್ತವನ್ನು ಸಂಸ್ಥೆಯಲ್ಲಿ ನಗದು ರೂಪದಲ್ಲಿ/ ಎಫ್.ಡಿ. ಇರಿಸತಕ್ಕದ್ದು ಮತ್ತು ಈ ಮೊತ್ತಕ್ಕೆ ಬಡ್ಡಿ ನೀಡಲಾಗುವುದಿಲ್ಲ. ಗುತ್ತಿಗೆ ಅವಧಿ ಮುಕ್ತಾಯದ ನಂತರ ಸಂಸ್ಥೆಗೆ ಯಾವುದೇ ಬಾಕಿ ಇಲ್ಲವೆಂದು ದೃಢಪಟ್ಟನಂತರ ಈ ಹಣವನ್ನು ಹಿಂತಿರುಗಿಸಲಾಗುವುದು. ಗುತ್ತಿಗೆದಾರರು ತಮ್ಮ ಕರ್ತವ್ಯದಿಂದ ವಿಮುಖನಾದರೆ ಅಂತಹವರು ಡೈರಿಯಲ್ಲಿಟ್ಟಿರುವ ಇಡು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

2. ಗುತ್ತಿಗೆದಾರ ತನಗೆ ದತ್ತವಾದ ಗುತ್ತಿಗೆಯನ್ನು ಮತ್ತೊಬ್ಬರಿಗೆ ವರ್ಗಾಯಿಸಲು ಅವಕಾಶವಿರುವುದಿಲ್ಲ. ಆದರೂ ಸಹ ಅನಿವಾರ್ಯ ಸಂದರ್ಭದಲ್ಲಿ ಆದೇಶ ಪಡೆದು ವಾಹನ ಓಡಿಸಿದ ಕನಿಷ್ಟ ಮೂರು ತಿಂಗಳ ನಂತರ ನಿಯಾಮಾನುಸಾರ ವರ್ಗಾವಣೆ ಶುಲ್ಕ ಪಾವತಿಸಿದಲ್ಲಿ ಒಂದು ಬಾರಿ ಮಾತ್ರ ವರ್ಗಾವಣೆ ಮಾಡಲಾಗುವುದು.

3. ಶಿವಮೊಗ್ಗ ಹಾಲು ಒಕ್ಕೂಟವು ತನ್ನ ಅಂತಿಮ ಆದೇಶದಲ್ಲಿ ಸೂಚಿತ ದಿನಾಂಕದಿಂದು ಆರಂಭಗೊಂಡು ಎರಡು ವರ್ಷಗಳ ಅವಧಿಗೆ ಸಾಗಾಣಿಕೆ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು. ಅಥವಾ ಡೇರಿಯು ತನ್ನ ವಿವೇಚನೆಗೆ ಸರಿಯೆಂದು ಕಂಡುಬಂದಲ್ಲಿ ಎಂಥದೇ ಸಂದರ್ಭದಲ್ಲಿ ಯಾವುದೇ ಕಾರಣ ನೀಡದೇ ಸಾಗಾಣಿಕೆ ಕಾಮಗಾರಿಯ ಅವಧಿಯನ್ನು ಕಡಿಮೆ ಅವಧಿಗೆ ನಿಗದಿಪಡಿಸಲು ಅಧಿಕಾರ ಉಳ್ಳದ್ದಾಗಿರುತ್ತದೆ.

4. ಸಾಗಾಣಿಕೆ ಕಾಮಗಾರಿಯಲ್ಲಿ ವಿಮುಖನಾದ ಗುತ್ತಿಗೆದಾರನನ್ನು ಅವಧಿಗೆ ಮುಂಚೆಯೇ ವಜಾ ಮಾಡಿದರೆ ಅಂತಹವನು ಇರಿಸಿರುವ ಇಡು ಹಣವನ್ನು ಭಾಗಶಃ ಅಥವಾ ಪೂರ್ಣ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ಬಗ್ಗೆ ಯಾವುದು ಸರಿಯೆಂದು ಶಿವಮೊಗ್ಗ ಹಾಲು ಒಕ್ಕೂಟವು ನಿರ್ಧರಿಸುತ್ತದೆ.

5. ಗುತ್ತಿಗೆದಾರರಿಗೆ ವಹಿಸಿರುವ ಸಾಗಾಣಿಕೆ ಮಾರ್ಗಗಳಲ್ಲಿ ಕೆಲವು ಗುತ್ತಿಗೆದಾರರ ಅಥವಾ ಎಲ್ಲಾ ಗುತ್ತಿಗೆದಾರರ ವಿತರಣೆ ಮಾಡಬೇಕಾದ ಸಾಗಾಣಿಕೆ ಮಾರ್ಗಗಳನ್ನು ಯಾವುದೇ ಕಾರಣ ನೀಡದೆ ಎಷ್ಟೇ ಅವಧಿಯವರೆಗೆ ಶಿವಮೊಗ್ಗ ಹಾಲು ಒಕ್ಕೂಟವು ತನ್ನ ವಿವೇಚನೆಗೆ ಸರಿಯೆಂದು ಕಂಡುಬಂದರೆ ಅಮಾನತುಗೊಳಿಸಬಹುದಾಗಿರುತ್ತದೆ.

6. ಗುತ್ತಿಗೆದಾರರಿಗೆ ವಹಿಸಿರುವ ಸಾಗಾಣಿಕೆ ಮಾರ್ಗಗಳಲ್ಲಿ ಕೆಲವು ಗುತ್ತಿಗೆದಾರರ ಅಥವಾ ಎಲ್ಲಾ ಗುತ್ತಿಗೆದಾರರ ಅಂಗೀಕಾರ ಪಡೆದ ಸಾಗಾಣಿಕೆ ಅವಧಿಯಲ್ಲಿ ಯಾವ ಸಮಯದಲ್ಲಿ ಬೇಕಾದರೂ ಅಮಾನತು ಆಜ್ಞೆಯನ್ನು ಶಿವಮೊಗ್ಗ ಹಾಲು ಒಕ್ಕೂಟ ಹಿಂದಕ್ಕೆ ಪಡೆಯಲು ಅಧಿಕಾರ ಉಳದ್ದಾಗಿರುತ್ತದೆ.

7. ಶಿವಮೊಗ್ಗ ಹಾಲು ಒಕ್ಕೂಟ ಸೂಚಿಸುವ ನಿರ್ದಿಷ್ಟ ದಿನಾಂಕದಿಂದ ಶೇಖರಣಾ ಮಾರ್ಗದಲ್ಲಿ ಕೆಲವು ಅಥವಾ ಎಲ್ಲಾ ಮಾರ್ಗದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸುವ ಗುತ್ತಿಗೆ ದರದನ್ವಯ ಸಾಗಾಣಿಕೆ ಕಾಮಗಾರಿಯನ್ನು ಪುನಾರಂಭಿಸಬಹುದಾಗಿರುತ್ತದೆ.

8. ಸಾಗಾಣಿಕೆ ಕಾಮಗಾರಿಯನ್ನು ಅಮಾನತುಗೊಳಿಸಿದ ಕಾರಣಕ್ಕಾಗಿ ಗುತ್ತಿಗೆದಾರರಿಗೆ ಪರಿಹಾರ ಧನವನ್ನು ನೀಡಲಾಗುವುದಿಲ್ಲ.

9. ಒಪ್ಪಂದವಾದ ಅರ್ಹ ಗುತ್ತಿಗೆ ಅವಧಿ ಮುಕ್ತಾಯವಾದ ಮೇಲೂ 3 ತಿಂಗಳಿಗೆ ಮೀರದಂತೆ ಗುತ್ತಿಗೆ ಅವಧಿಯನ್ನು ವಿಸ್ತರಿಸಲು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಅವಕಾಶವಿರುತ್ತದೆ.

10. ಗುತ್ತಿಗೆದಾರ ತನ್ನ ಸ್ವಂತ ವಾಹನವನ್ನು ಸಾಗಾಣಿಕೆ ಕಾಮಗಾರಿಗೆ ಓಡಿಸತಕ್ಕದ್ದು, ಹಾಗೂ ವಾಹನಕ್ಕೆ ಸಂಬಂಧಪಟ್ಟ ನೋಂದಣಿ, ನೋಂದಾವಣೆ ಪ್ರಮಾಣ ಪತ್ರ ತೆರಿಗೆ ಪಾವತಿ ರಶೀದಿ, ವಿಮಾ ಪ್ರಮಾಣ ಪತ್ರ ಹಾಗೂ ಇತರ ಎಲ್ಲಾ ಅಗತ್ಯ ಪ್ರಮಾಣ ಪತ್ರಗಳೂ, ಕಾಗದ ಪತ್ರಗಳ ಮೂಲ ಪ್ರತಿಯನ್ನು ಶಿವಮೊಗ್ಗ ಹಾಲು ಒಕ್ಕೂಟದ ನಿರ್ವಾಹಕ ನಿರ್ದೇಶಕರ ಸಮ್ಮುಖದಲ್ಲಿ ಹಾಜರು ಪಡಿಸಿ ಸ್ವಂತ ವಾಹನವೆಂದು ದೃಡಪಡಿಸಿ ಸಾಗಾಣಿಕೆ ಕಾಮಗಾರಿಯ ಗುತ್ತಿಗೆ ಕಾರ್ಯಕ್ಕೆ ಪ್ರವೇಶಿಸಬೇಕಾಗುತ್ತದೆ ಮಾರ್ಗದಲ್ಲಿ ಸಮರ್ಥವಾಗಿ ಓಡಬಲ್ಲದೆಂದು ಹಾಲು ಹಾಲಿನ ಉತ್ಪನ್ನಗಳನ್ನು ಸಾಗಿಸಬಲ್ಲದೆಂದು ದೃಢಪಡಿಸಬೇಕಾಗುತ್ತದೆ. ಶಿವಮೊಗ್ಗ ಹಾಲು ಒಕ್ಕೂಟವು ಕೆಲ ವಾಹನಗಳು ಸಮರ್ಥವಲ್ಲವೆಂದು ಪರಿಗಣಿಸಿದರೆ ಅಂತಹ ವಾಹನಗಳನ್ನು ಬದಲಿಸುತ್ತೇನೆಂದು ಪ್ರಮಾಣಿಸಿದ ನಂತರ ಗುತ್ತಿಗೆ ಕಾರ್ಯ ಕೈಗೊಳ್ಳಬಹುದಾಗಿರುತ್ತದೆ.

11. ಶಿವಮೊಗ್ಗ ಹಾಲು ಒಕ್ಕೂಟವು ಕೇಳಿದ್ದಲ್ಲಿ ಪುರಸಭೆ/ನಗರ ಸಭೆ/ಮಹಾ ನಗರಪಾಲಿಕೆ ವತಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಅಂದರೆ ಆಹಾರ ಪದಾರ್ಥಗಳನ್ನು ತನ್ನ ವಾಹನದಲ್ಲಿ ಸಾಗಾಣಿಕೆ ಮಾಡಬಹುದು ಎಂದು ಪುರಸಭೆಯಿಂದ/ನಗರ ಸಭೆ/ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಿಂದ ಅಗತ್ಯ ಅನುಮತಿ ಪತ್ರ ಪಡೆದಿರುವುದನ್ನು ಗುತ್ತಿಗೆದಾರ ಹಾಜರುಪಡಿಸತಕ್ಕದ್ದು.

12. ಗುತ್ತಿಗೆ ವಾಹನಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರ ಈ ಕೆಳಗೆ ಸೂಚಿಸಿರುವ ಅಗತ್ಯಗಳನ್ನು ಹಾಗೂ ನಿರ್ದಿಷ್ಟ ಮಾಹಿತಿಗಳನ್ನು ಪೂರೈಕೆ ಮಾಡುತ್ತೇನೆ ಎಂದು ಒಪ್ಪಿಗೆ ಸೂಚಿಸತಕ್ಕದ್ದು.

13ಅ. ರಾತ್ರಿ ಅವಧಿಯಲ್ಲಿ ವಾಹನಕ್ಕೆ ಹಾಲು ಭರ್ತಿಮಾಡಲು ಹಾಗೂ ಇಳಿಸಲು ಅನುಕೂಲವಾಗುವಂತೆ ವಾಹನದ ಅಗತ್ಯ ಕಡೆಗಳೆಲ್ಲೆಲ್ಲಾ ಬೆಳಕಿನ ವ್ಯವಸ್ಥೆ ಮಾಡಿರತಕ್ಕದ್ದು.

13. ಅನುಬಂಧ–ಸಿನಲ್ಲಿ ನಮೂದಿಸಿರುವಂತೆ ಅಗತ್ಯ ಸಾಮರ್ಥ್ಯದ ವಾಹನವನ್ನು ಒದಗಿಸಲು ಗುತ್ತಿಗೆದಾರ ಬದ್ಧರಾಗಿರಬೇಕು/ಒಪ್ಪಿಗೆಯನ್ನು ಸೂಚಿಸತಕ್ಕದ್ದು.

15. ಕ್ಯಾನು ನಂದಿನಿ ಉತ್ಪನ್ನಗಳನ್ನು ಭರ್ತಿ ಮಾಡಲು ಇಳಿಸಲು ಹಾಗೂ ಸಾಗಾಣಿಕೆ ಕಾರ್ಯಕ್ಕೆ ಅಗತ್ಯವಾದ ಕೆಲಸಗಾರರನ್ನು ಗುತ್ತಿಗೆದಾರರೇ ಸ್ವಂತವಾಗಿ ವ್ಯವಸ್ಥೆ ಮಾಡತಕ್ಕದ್ದು. ಚಾಲಕ ಹೊರತು ಪಡಿಸಿ ಕನಿಷ್ಟ ಒಬ್ಬರು ಲೋಡರ್‌ಗಳನ್ನು ಒದಗಿಸಬೇಕು. ಗುತ್ತಿಗೆ ಕಾರ್ಮಿಕರ ನಿಯಂತ್ರಣ ಹಾಗೂ ರದ್ದತಿ ವಿಧೇಯಕದ ನಿಯಮಕ್ಕೆ ಬದ್ಧನಾಗಿರಲು ಒಪ್ಪಿಗೆ ಸೂಚಿಸತಕ್ಕದ್ದು. ಕಾರ್ಮಿಕ ಕಾನೂನು/ನಿಯಮ ಉಲ್ಲಂಘಿಸಿದ ಕಾರಣದಿಂದಾಗಿ ಗುತ್ತಿಗೆ ಕಾರ್ಮಿಕ ಪರಿಹಾರ ಕೋರಿದರೆ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಆಗುವ ನಷ್ಟವನ್ನು ಗುತ್ತಿಗೆದಾರ ಭರ್ತಿಮಾಡತಕ್ಕದ್ದು. ಶಿವಮೊಗ್ಗ ಹಾಲು ಒಕ್ಕೂಟವು ನಿಗದಿಪಡಿಸಿರುವ ಸಮವಸ್ತ್ರವನ್ನು ಚಾಲಕ ಹಾಗೂ ಲೋಡರ್‌ಗಳಿಗೆ ಗುತ್ತಿಗೆದಾರ ತನ್ನ ಸ್ವಂತ ಖರ್ಚಿನಲ್ಲಿ ಒದಗಿಸತಕ್ಕದ್ದು.

16. ಕಾರ್ಮಿಕ ಕಾನೂನು ವರ್ಕ್ಸ್‌ಮೆನ್ಸ್ ಕಾಂಪನ್ಸೇಷನ್ ಆಕ್ಟ್ ಅಥವಾ ಇತರೇ ಶಾಸನ ಬದ್ದ ಕಾಯಿದೆ, ನಿಯಮ ನಿಬಂಧನೆಗಳ ಷರತ್ತುಗಳನ್ನು ಪಾಲಿಸಬೇಕಾದ ಜವಾಬ್ದಾರಿ ಗುತ್ತಿಗೆದಾರನ ಮೇಲೆ ಸಂಪೂರ್ಣವಾಗಿ ಇರುತ್ತದೆ. ಹಾಗೂ ಈ ಬಗ್ಗೆ ಯಾವುದೇ ನಷ್ಟ/ಜವಾಬ್ದಾರಿ ಹೊಣೆ ಗುತ್ತಿಗೆದಾರನದ್ದಾಗಿರುತ್ತದೆ. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

17. ಶಿವಮೊಗ್ಗ ಹಾಲು ಒಕ್ಕೂಟದ ಅಧಿಕಾರ ವರ್ಗ ಕಾಲಕಾಲಕ್ಕೆ ನೀಡುವ ಹಲವು ಸೂಚನೆಗಳನ್ನು ಎಚ್ಚರಿಕೆಯಿಂದ ಪಾಲಿಸತಕ್ಕದ್ದು. ಅದು ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸುರಕ್ಷಿತವಾಗಿ ಸಾಗಾಣಿಕೆ ಮಾಡುವ ಕುರಿತಾದವುಗಳಾಗಿರಬಹುದು. ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಸಾಗಿಸಲು ಒದಗಿಸಿರುವ ಕ್ರೇಟುಗಳು, ಕ್ಯಾನುಗಳು, ಪಾತ್ರೆ ಸಾಮಾನುಗಳ ಕುರಿತಾದವುಗಳಾಗಬಹುದು. ಅವುಗಳನ್ನು ನಜ್ಜು ಗುಜ್ಜು ಮಾಡದೇ, ಪಡೆದ ನಂತರ ಮುರಿದು ಹಾಕದೇ ಸುರಕ್ಷಿತವಾಗಿ ಬಳಸುವ ಕುರಿತಾಗಿರಬಹುದು.

18. ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಆಯಾ ಮಾರಾಟಕೇಂದ್ರಗಳಿಗೆ ಪೂರೈಕೆ ಮಾಡಿದ ನಂತರ ಆ ದಿನದ ಮಾರಾಟದಿಂದ ಸಂದಾಯವಾಗುವ ಮೊತ್ತವನ್ನು ನಗದಾಗಿ, ಧನಾದೇಶದ ಮೂಲಕ ಚೆಕ್ ನಗದು ಮಾರಾಟ ತಃಖ್ತೆಯನ್ನು ಸಂಗ್ರಹಿಸಲು ಗುತ್ತಿಗೆದಾರರು ನೇರ ಹೊಣೆಗಾರರಾಗಿರುತ್ತಾರೆ. ಈ ರೀತಿ ಸಂಗ್ರಹಿಸಿದ ನಗದು/ಚೆಕ್‌ಗಳನ್ನು ಶಿವಮೊಗ್ಗ ಹಾಲು ಒಕ್ಕೂಟದ ಮಾರುಕಟ್ಟೆ ವಿಭಾಗಕ್ಕೆ ತಲುಪಿಸಲು ಬದ್ದನಾಗಿರುತ್ತಾನೆ ಅಥವಾ ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸಿದ ಬ್ಯಾಂಕಿಗೆ ಜಮಾ ಮಾಡಿ, ಚಲನ್ ನೀಡತಕ್ಕದ್ದು.

19. ಮಾರಾಟಗಾರನಿಂದ ಪಡೆದಿದ್ದ ಚೆಕ್ ಮಾರಾಟ ತಃಖ್ತೆಯಲ್ಲಿ ಯಾವುದಾದರೂ ಕೆಲವನ್ನು ಕಳೆದಿದ್ದರೆ ಅಥವಾ ಮಾರುಕಟ್ಟೆ ವಿಭಾಗಕ್ಕೆ ತಲುಪಿಸದೇ ಇದ್ದರೆ, ಕಳೆದಿರುವ ಬಗ್ಗೆ ಅಥವಾ ತಪ್ಪಾಗಿ ಇರಿಸಿರುವ ಬಗ್ಗೆ ಸೂಕ್ತ ತೃಪ್ತಿಕರ ಸಮಜಾಯಿಷಿ ನೀಡುವವರೆಗೆ ಶಿವಮೊಗ್ಗ ಹಾಲು ಒಕ್ಕೂಟವು ಸೂಕ್ತ ದಂಡ ವಿಧಿಸಬಹುದಾಗಿರುತ್ತದೆ.

20. ಯಾವುದೇ ಚೆಕ್ ಅಥವಾ ಮಾರಾಟ ತಃಖ್ತೆಯನ್ನು ಗುತ್ತಿಗೆದಾರ ಅಥವಾ ಅವರ ನೌಕರರು ಬದಲಿಸಿದ್ದೇ ಆದರೆ ಅಂತಹ ಗುತ್ತಿಗೆದಾರರಿಗೆ ಶಿವಮೊಗ್ಗ ಹಾಲು ಒಕ್ಕೂಟ ಅಧಿಕಾರ ವರ್ಗ ಸೂಕ್ತ ದಂಡ ವಿಧಿಸಲು ಅಧಿಕಾರ ಹೊಂದಿರುತ್ತದೆ.

21. ಸಾರ್ವಜನಿಕರ ಅನುಕೂಲಕ್ಕಾಗಿ ಕಾಲಕಾಲಕ್ಕೆ ಶಿವಮೊಗ್ಗ ಹಾಲು ಒಕ್ಕೂಟವು ಹಾಲು ಶೇಖರಣಾ ಮಾರ್ಗದ ಸಂಘಗಳನ್ನು ಬದಲಿಸಬಹುದಾಗಿರುತ್ತದೆ. ಈ ರೀತಿಯ ಬದಲಾವಣೆ ಕಾರಣಕ್ಕಾಗಿ ಮಾರ್ಗದಲ್ಲಿನ ಮಾರಾಟ ಕೇಂದ್ರದಿಂದ ಪಡೆಯಬಹುದಾದ ನಗದು/ತಃಖ್ತೆ ಕಾರಣದಿಂದಾಗಿ ಗುತ್ತಿಗೆದಾರ ಯಾವುದೇ ನಷ್ಟವನ್ನು ಭರಿಸುವಂತೆ ಕೋರಲು ಅವಕಾಶ ಇರುವುದಿಲ್ಲ.

22. ಹಾಲು ಶೇಖರಣೆ ಸಂಘಗಳು ಕಡಿಮೆ/ಹೆಚ್ಚಾಗಿ ಒಟ್ಟು ಕ್ರಮಿಸಬೇಕಾದ ದೂರ ವ್ಯತ್ಯಯಗೊಂಡರೂ ಗುತ್ತಿಗೆದಾರ ಸಾಗಾಣಿಕೆ ಕಾಮಗಾರಿಗೆ ತನ್ನ ಒಪ್ಪಿಗೆಯನ್ನು ಸೂಚಿಸತಕ್ಕದ್ದು.

23. ಪಶುಆಹಾರ ಸಾಗಾಣಿಕೆ ಗುತ್ತಿಗೆದಾರರು ಶಿವಮೊಗ್ಗ ಹಾಲು ಒಕ್ಕೂಟವು ನೀಡುವ ಪಶುಆಹಾರ ಸರಬರಾಜಿನ ಬೇಡಿಕೆ ಪಟ್ಟಿಯನ್ನು ಪಡೆದು ಅದರಂತೆ ಪಶುಆಹಾರ ಸಾಗಾಣಿಕೆ ಮಾಡಿ, ಉಗ್ರಾಣ / ಸಂಘಗಳಿಗೆ ನೀಡಿದ ಪಶುಆಹಾರದ ದಾಖಲಾತಿ ಪಡೆದು ಅದರಂತೆ ಬಿಲ್ಲು ತಯಾರಿಸಿ 15 ದಿನಕ್ಕೊಮ್ಮೆ ಹಣಪಾವತಿಗಾಗಿ ಕಛೇರಿಗೆ ಸಲ್ಲಿಸುವುದು. ಸಂಘಗಳಿಗೆ / ಉಗ್ರಾಣಗಳಿಗೆ ಪಶುಆಹಾರ ನೀಡಿದ್ದಕ್ಕೆ ಸ್ವೀಕೃತಿ ಪತ್ರ ಕಡ್ಡಾಯವಾಗಿದ್ದು ಸ್ವೀಕೃತಿ ಪತ್ರದಲ್ಲೇನಾದರು ವ್ಯತ್ಯಾಸವಾದಲ್ಲಿ ಸಂಬಂಧಿಸಿದ ಗುತ್ತಿಗೆದಾರರನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು.

24. ಶೇಖರಣೆ ಹಾಗೂ ವಿತರಣಾ ಮಾರ್ಗದ ವಾಹನಗಳ ಪಥವನ್ನು ಶಿವಮೊಗ್ಗ ಹಾಲು ಒಕ್ಕೂಟವು ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು ಹಾಗೂ ಸಂಘಗಳನ್ನು ಕೈಬಿಡಬಹುದು ಅಥವಾ ಸೇರಿಸಬಹುದು, ಇಂತಹ ಸಂದರ್ಭದಲ್ಲಿ ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ.10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಗುತ್ತಿಗೆದಾರರ ಮನವಿಯನ್ನು ಪರಿಗಣಿಸಿ ಮಾರುಕಟ್ಟೆ ಬೆಲೆ ಆಧಾರದ ಮೇಲೆ ಅಥವಾ ಪ್ರೋರೇಟಾ ಆಧಾರದಲ್ಲಿ ಕಿ.ಮೀ.ದರ ಹೆಚ್ಚು ಅಥವಾ ಕಡಿಮೆ ಮಾಡಲಾಗುವುದು. ಅಂತಿಮವಾಗಿ ಶಿವಮೊಗ್ಗ ಹಾಲು ಒಕ್ಕೂಟದ ನಿರ್ವಾಹಕ ನಿರ್ದೇಶಕರ ನಿರ್ಧಾರವೇ ಅಂತಿಮವಾಗಿರುತ್ತದೆ.

25. ಹಾಲು ಸಂಗ್ರಹಣೆ ವಾಹನಗಳು ಹಾಲಿನ ಸುಗ್ಗಿಯ ಕಾಲದಲ್ಲಿ ಅಥವಾ ಹಾಲು ಶೇಖರಣೆ ನಿಗಧಿಪಡಿಸಿದ ಸಾಮರ್ಥ್ಯಕ್ಕಿಂತ ಹೆಚ್ಚಿನ ಹಾಲು/ಹಾಲಿನ ಉತ್ಪನ್ನಗಳನ್ನು ಸಾಗಾಣಿಕೆ ಮಾಡಿದಲ್ಲಿ, ಪ್ರೋರೆಟಾ ಆಧಾರದ ಮೇಲೆ ದರವನ್ನು ಪರಿಷ್ಕರಿಸಲಾಗುವುದು. ಆದರೆ ನಿಗಧಿಪಡಿಸಿದ ಸಾಮರ್ಥ್ಯಕ್ಕಿಂತ ಹೆಚ್ಚುವರಿ ಸಾಗಾಣಿಕೆಯು ಶೇ. 10 ಕ್ಕಿಂತ ಕಡಿಮೆಯಿದ್ದು ಮತ್ತು 30 ದಿನಗಳ ಒಳಗೆ ಇದ್ದಾಗ ಈ ನಿಯಮ ಅನ್ವಯಿಸುವುದಿಲ್ಲ. ಅಂತಿಮವಾಗಿ ಶಿವಮೊಗ್ಗ ಹಾಲು ಒಕ್ಕೂಟದ ನಿರ್ವಾಹಕ ನಿರ್ದೇಶಕರ ತೀರ್ಮಾನವೇ ಅಂತಿಮವಾಗಿದೆ.

26. ನಿಗಧಿಪಡಿಸಿರುವ ಸಾಗಾಣಿಕೆ ಮಾರ್ಗದಲ್ಲಿ ಓಡಾಡುವ ವಾಹನ ಚಲಿಸಲು ಸಾಧ್ಯವಾಗದೆ ಕೆಟ್ಟುನಿಂತರೆ 30 ನಿಮಿಷಗಳೊಗಾಗಿ ಬದಲಿ ವಾಹನವನ್ನು ಖಚಿತವಾಗಿ ವ್ಯವಸ್ಥೆ ಮಾಡಬೇಕಾದ ಹೊಣೆಗಾರಿಕೆ ಗುತ್ತಿಗೆದಾರನದಾಗಿರುತ್ತದೆ.

27. ಶಿವಮೊಗ್ಗ ಹಾಲು ಒಕ್ಕೂಟದ ನೌಕರ ವರ್ಗ, ಅಧಿಕೃತ ಪ್ರತಿನಿಧಿಗಳು, ಗುತ್ತಿಗೆದಾರನ ವಾಹನಗಳಲ್ಲಿ ಗುತ್ತಿಗೆದಾರನ ಸಿಬ್ಬಂದಿಯ ಜೊತೆಗೆ ಉಚಿತವಾಗಿ ಪ್ರಯಾಣಿಸಲು ಅನುಮತಿಯನ್ನು ಗುತ್ತಿಗೆದಾರ ನೀಡತಕ್ಕದ್ದು.

28. ಗುತ್ತಿಗೆ ಕಾರ್ಯನಿರ್ವಹಿಸುತ್ತಿರುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ನೌಕರ ವರ್ಗ ಅಥವಾ ಗುತ್ತಿಗೆದಾರ ಸಾಗಾಣಿಕೆ ಹಾಗೂ ಭರ್ತಿಮಾಡಲು ಇಳಿಸಲು ನೇಮಿಸಿಕೊಂಡಿರುವ ಸಿಬ್ಬಂದಿಗಳನ್ನು ಹೊರತುಪಡಿಸಿ ಮತ್ತಾರನ್ನೂ ಈ ಕಾರ್ಯಕ್ಕೆ ನೇಮಕ ಆಗಿರುವ ವಾಹನಗಳಲ್ಲಿ ಸಂಚರಿಸಲು ಅವಕಾಶ ನೀಡತಕ್ಕದ್ದಲ್ಲ.

29. ಸಾಗಾಣಿಕೆಗೆ ಅನುಮತಿ ನೀಡಿರುವ ಸಾಮಾಗ್ರಿಗಳನ್ನಲ್ಲದೆ ಮತ್ತಾವುದೇ ಸಾಮಾಗ್ರಿಗಳನ್ನು ಈ ವಾಹನದಲ್ಲಿ ಸಾಗಿಸತಕ್ಕದ್ದಲ್ಲ.

30. ಸಾಗಾಣಿಕೆ ವೆಚ್ಚ ಈ ಕೆಳಕಂಡ ವಿಷಯಕ್ಕೆ ಹೊರತುಪಡಿಸಿ ಬೇರೆ ಯಾವುದೇ ಕಾರಣಕ್ಕೆ ಏರಿಕೆ ಸಾಧ್ಯವಿಲ್ಲ. ಐ.ಓ.ಸಿ., ಜಿ.ಓ.ಕೆ., ಡೀಸೆಲ್‌ನ ಪ್ರತಿ ಲೀಟರ್‌ನ ಬೆಲೆಯಲ್ಲಿ ಹೆಚ್ಚಳ ಮಾಡುವ ಪರಿಮಾಣವನ್ನು ವಿವಿಧ ಸಾಮರ್ಥ್ಯದ ವಾಹನಗಳಿಗನುಗುಣವಾಗಿ ಹೆಚ್ಚಳದ ಅಥವಾ ಇಳಿಕೆಯ ಪ್ರಮಾಣ ಪ್ರತಿ ಲೀಟರ್‌ಗೆ ಸರಾಸರಿ ನೀಡುವ ಮೈಲೇಜ್ ಈ ಕೆಳಗಿನಂತಿರುತ್ತದೆ.

| | | | |
|---|---|---|---|
| ಅ) | 1 ಟನ್ ವರೆಗಿನ ವಾಹನಗಳಿಗೆ | ಃ | 22.00 ಕಿ.ಮೀ. |
| ಆ) | 1.0 ರಿಂದ 1.5 ಟನ್ ವಾಹನಗಳಿಗೆ<br>(ಟಾಟಾ ಏಸ್, ಮ್ಯಾಕ್ಸ್ ಪಿಕಪ್) | ಃ | 12.00 ಕಿ.ಮೀ. |
| ಇ) | 1.5 ರಿಂದ 3.0 ಟನ್ ವಾಹನಗಳಿಗೆ | ಃ | 10.00 ಕಿ.ಮೀ. |
| ಈ) | 3.1 ರಿಂದ 3.5 ಟನ್ ವಾಹನಗಳಿಗೆ | ಃ | 8.00 ಕಿ.ಮೀ. |
| ಉ) | 3.6 ರಿಂದ 6 ಟನ್ ವಾಹನಗಳಿಗೆ | ಃ | 7.00 ಕಿ.ಮೀ. |
| ಊ) | 6.1 ರಿಂದ 8 ಟನ್ ವಾಹನಗಳಿಗೆ | ಃ | 6.00 ಕಿ.ಮೀ. |
| ಋ) | ವಿಸ್ತಾ/ಇಂಡಿಗೋ/ಬೋಲ್ಟ್ ಕಾರುಗಳು | ಃ | 18.00 ಕಿ.ಮೀ. |

30ಎ. ಡೀಸೆಲ್ ದರದಲ್ಲಿನ ಇಳಿಮುಖ ನಿರಂತರವಾಗಿ ನೀಡುತ್ತಿರುವ ಸಾಗಾಣಿಕೆ ದರದಲ್ಲಿನ ಇಳಿಕೆಗೆ ಕಾರಣವಾಗಿರುತ್ತದೆ.

31. ದರಪಟ್ಟಿ ದಸ್ತಾವೇಜು ಆಹ್ವಾನಿಸಿದ ಸಂದರ್ಭದಲ್ಲಿ ಪ್ರಕಟವಾದ ಮಾರ್ಗದ ದೂರ ಕೇವಲ ತಾತ್ಕಾಲಿಕ ಹಾಗೂ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸುವ ಕ್ರಮಕ್ಕಾಗಿ ನಮೂದಿಸಲಾಗಿದ್ದು, ಹಾಗಾಗಿ ಶಿವಮೊಗ್ಗ ಹಾಲು ಒಕ್ಕೂಟದ ಪ್ರತಿನಿಧಿಗಳು ಹಾಗೂ ಗುತ್ತಿಗೆದಾರನ ಪ್ರತಿನಿಧಿಗಳು ಕಿ.ಮೀ. ಪರಿಶೀಲನೆ (ದೂರ ಪರಿಶೀಲನೆ) ನಡೆಸಿ ನೀಡುವ ಖಚಿತ ದೂರದ ವಿವರವನ್ನು ಗುತ್ತಿಗೆದಾರ ಒಪ್ಪಿಕೊಳ್ಳತಕ್ಕದ್ದು.

32. ಶಿವಮೊಗ್ಗ ಹಾಲು ಒಕ್ಕೂಟವು ನಿರ್ದಿಷ್ಟಪಡಿಸಿದ ವೇಳೆಯಲ್ಲಿ, ಗುತ್ತಿಗೆದಾರ ವಾಹನಗಳನ್ನು ಪೂರೈಸತಕ್ಕದ್ದು. ಗುತ್ತಿಗೆದಾರನಿಗೆ ಅಲ್ಪಕಾಲೀನ ಸೂಚನೆ ನೀಡಿ ವೇಳೆ ಬದಲಿಸುವ ಹಕ್ಕು ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಇರುತ್ತದೆ.

33. ಗಲಭೆಗಳಿಂದಾಗಿ ನಾಗರೀಕರ ಪ್ರತಿಭಟನೆ, ಕಾರ್ಮಿಕರ ಮುಷ್ಕರ/ಹೋರಾಟದಿಂದಾಗಿ ಅಥವಾ ಬಂದ್ ಸಮಯದಲ್ಲಿ, ಗುತ್ತಿಗೆದಾರನ ವಾಹನ ಜಖಂಗೊಂಡರೆ ಗುತ್ತಿಗೆದಾರ ಪರಿಹಾರ ಕೇಳುವ ಹಾಗಿಲ್ಲ. ಸಂಸ್ಥೆಯ ಒಳ ಆವರಣದಲ್ಲಿ ಅಥವಾ ಹೊರ ಆವರಣದಲ್ಲಿ ಹೊರಗಿನವರಿಂದಾಗಲೀ ಜಖಂ ಆದಲ್ಲಿ ಗುತ್ತಿಗೆದಾರ ಪರಿಹಾರ ಕೇಳುವ ಆಗಿಲ್ಲ.

34. ಈ ಗುತ್ತಿಗೆಯಲ್ಲಿ ಗುತ್ತಿಗೆದಾರ ಅರಿತಿರಬೇಕಾದುದು ಈ ಅಂಶವನ್ನು ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ನಿರಂತರವಾಗಿ ಯಾವುದೇ ಅಡೆತಡೆ ಇಲ್ಲದೆ ನಗರ ಹಾಗು ಪಟ್ಟಣಗಳಲ್ಲಿ ಸರಬರಾಜು ಮಾಡುತ್ತಿರಬೇಕು. ಕಾನೂನು ಸುವ್ಯವಸ್ಥೆಯ ಸಂದರ್ಭದಲ್ಲಾಗಲೀ, ಹವಾಮಾನ ವೈಪರೀತ್ಯದಿಂದಾಗಲೀ ಸರಬರಾಜಿನಲ್ಲಿ ವ್ಯತ್ಯಯವಾಗದಂತೆ ನಿಗದಿಪಡಿಸಿರುವ ಎಲ್ಲಾ ಮಾರ್ಗಗಳಲ್ಲಿ ನಿರಂತರವಾಗಿ ಸರಬರಾಜು ಆಗುತ್ತಿರಬೇಕು.

35. ಮಿಲಿಟರಿ ಹಾಗೂ ನಾಗರೀಕ ಅಧಿಕಾರವು ಕರ್ಫ್ಯೂ ವಿಧಿಸಿರುವ ಸಂದರ್ಭದಲ್ಲಿ ಯಾವುದೇ ನಿರ್ಬಂಧ ಹಾಕಿರುವ ಸಂದರ್ಭದಲ್ಲಿ ವಾಹನ ಓಡಾಟಕ್ಕೆ ನಿರ್ಬಂಧವನ್ನು ಹೊರಿಸಿರುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ಯಾರಿಂದ ವಾಹನ ಓಡಾಟಕ್ಕೆ ಅನುಮತಿ ಪಡೆಯಬೇಕೋ ಅಂತ ಅಧಿಕೃತ ಅಧಿಕಾರಿಗಳಿಂದ ಅನುಮತಿ ಪಡೆದು ವಾಹನ ಹಾಗೂ ಸಿಬ್ಬಂದಿಯ ಚಲನವಲನಕ್ಕೆ ಅವಕಾಶ ಕಲ್ಪಿಸಿಕೊಡುತ್ತದೆ.

36. ಗುತ್ತಿಗೆದಾರನ ನೌಕರ, ಪ್ರತಿನಿಧಿ ಸಾಗಾಣಿಕೆಗೆ ನೀಡಿರುವ ಹಾಲು ಮತ್ತು ಹಾಲಿನ ಉತ್ಪನ್ನವನ್ನು ಇತರೇ ವಸ್ತುಗಳನ್ನು ಕದಿಯುತ್ತಿದ್ದರೆ ಮತ್ತು ಹಾಳು ಮಾಡುತ್ತಿದ್ದರೆ ಅದು ಸಾಗಾಣಿಕೆ ಸಂದರ್ಭದಲ್ಲಿ ಭರ್ತಿಮಾಡುವ, ಇಳಿಸುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಆವರಣದಲ್ಲಿಯೇ ಅಥವಾ ವಿತರಣಾ ಕೇಂದ್ರಗಳಲ್ಲಿ ಆಗುತ್ತಿದ್ದರೆ ಇದರಿಂದಾಗುವ ನಷ್ಟ ಹಾಗೂ ಹಾಳಾಗುವುದಕ್ಕೆ ಗುತ್ತಿಗೆದಾರನೇ ಹೊಣೆಯಾಗುತ್ತಾನೆ. ಹಾಗೂ ಆದ ನಷ್ಟವನ್ನು ಗುತ್ತಿಗೆದಾರ ಭರಿಸತಕ್ಕದ್ದು, ಇಲ್ಲವೇ ಶಿವಮೊಗ್ಗ ಹಾಲು ಒಕ್ಕೂಟ ತನ್ನ ವಿವೇಚನೆಗೆ ಸರಿಕಂಡುಬಂದರೆ ಗುತ್ತಿಗೆದಾರ ಇರಿಸಿರುವ ಇಡು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅಥವಾ ಗುತ್ತಿಗೆಯನ್ನೇ ವಜಾ ಮಾಡಬಹುದಾಗಿರುತ್ತದೆ ಅಥವಾ ಸೂಕ್ತ ದಂಡ ವಿಧಿಸಲಾಗುವುದು.

37. ಗುತ್ತಿಗೆದಾರನ ನೌಕರ/ಪ್ರತಿನಿಧಿ ಶಿವಮೊಗ್ಗ ಹಾಲು ಒಕ್ಕೂಟವು ನೌಕರರೊಂದಿಗೆ ಏಜೆಂಟರೊಂದಿಗೆ ಅಥವಾ ಸಾರ್ವಜನಿಕರೊಂದಿಗೆ ತಪ್ಪಾಗಿ ನಡೆದುಕೊಂಡರೆ ಅಕ್ರಮ ವ್ಯವಹಾರಗಳಲ್ಲಿ ತೊಡಗಿದರೆ ಅಂತಹ ನೌಕರನನ್ನು ಸಾಗಾಣಿಕೆ ಕಾರ್ಯದಿಂದ ತೆಗೆದುಹಾಕಿ ಎಂದು ಶಿವಮೊಗ್ಗ ಹಾಲು ಒಕ್ಕೂಟವು ಸೂಚಿಸಬಹುದು. ಹಾಗೆ ಸೂಚಿಸಿದಾಗ ಗುತ್ತಿಗೆದಾರ ಅಂತಹ ಅನಪೇಕ್ಷಿತ ವ್ಯಕ್ತಿಯನ್ನು ಕೂಡಲೇ ಕೆಲಸದಿಂದ ತೆಗೆದುಹಾಕಬೇಕು. ಅವನನ್ನು ಶಿವಮೊಗ್ಗ ಹಾಲು ಒಕ್ಕೂಟದ ಇದೇ ಗುತ್ತಿಗೆದಾರರನಾಗಲೀ, ಇತರೇ ಗುತ್ತಿಗೆದಾರನಾಗಲೀ ಮತ್ತೆ ಕೆಲಸಕ್ಕೆ ನೇಮಕ ಮಾಡಿಕೊಳ್ಳಬಾರದು.

38. ನಿರ್ದಿಷ್ಟಪಡಿಸಿದ ವೇಳೆಯಲ್ಲಿ ಗುತ್ತಿಗೆದಾರ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ಸಾಗಾಣಿಕೆ/ವಿತರಣೆ ಮಾಡುವಲ್ಲಿ ವಿಫಲನಾದರೆ ಇದರಿಂದಾಗಿ ಹಾಲು ಹುಳಿ ಆಗಿ ಹಾಳಾಗುವ ಸಂಭವವಿರುತ್ತದೆ. ಆದ್ದರಿಂದ ಗುತ್ತಿಗೆದಾರರು ತಮಗೆ ವಹಿಸಿದ ಜವಾಬ್ದಾರಿಯನ್ನು ಸಮಯಕ್ಕೆ ಸರಿಯಾಗಿ ನಿಭಾಯಿಸತಕ್ಕದ್ದು.

39. ಗುತ್ತಿಗೆದಾರನ ವಾಹನ ಸಾಗಾಣಿಕೆ ಕಾರ್ಯಕ್ಕೆ ಶಿವಮೊಗ್ಗ ಹಾಲು ಒಕ್ಕೂಟದ ಆವರಣಕ್ಕೆ ಪ್ರವೇಶಿಸುವ, ನಿರ್ಗಮಿಸುವ, ಓಡಾಡುವ ಸಂದರ್ಭದಲ್ಲಿ ಶಿವಮೊಗ್ಗ ಹಾಲು ಒಕ್ಕೂಟದ ಕಟ್ಟಡದ ಆಸ್ತಿಗೆ ಹಾನಿಯಾಗದಂತೆ ಎಚ್ಚರವಹಿಸತಕ್ಕದ್ದು. ಹಾಗಲ್ಲದೆ ನಷ್ಟ ಉಂಟುಮಾಡಿದರೆ, ನಷ್ಟದ ಮೊತ್ತವನ್ನು ಅವರ ಬಿಲ್ಲಿನಲ್ಲಿ ಕಡಿತಮಾಡಿ ಅಥವಾ ಇತರ ಅಗತ್ಯ ಕ್ರಮದಿಂದ ವಸೂಲು ಮಾಡಲಾಗುವುದು.

40. ಗುತ್ತಿಗೆದಾರನ ವಾಹನ ಡೇರಿಯ ಆವರಣದಲ್ಲಿ ಅಥವಾ ಹೊರಗಡೆ ಅಪಘಾತಕ್ಕೆ ಗುರಿಯಾದರೆ ಆ ನಷ್ಟವನ್ನು ಶಿವಮೊಗ್ಗ ಹಾಲು ಒಕ್ಕೂಟದಿಂದ ಪರಿಹಾರವಾಗಿ ಪಡೆಯತಕ್ಕದ್ದಲ್ಲ. ಗುತ್ತಿಗೆದಾರ ಗುತ್ತಿಗೆ ಅವಧಿ/ಹಚ್ಚುವರಿ ಅವಧಿಯಲ್ಲಿ ಸಾಗಾಣಿಕೆ ಮಾಡುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೌಲ್ಯಕ್ಕೆ ವಿಮೆ ಮಾಡಿಸಿರಬೇಕು.

41. ಗುತ್ತಿಗೆದಾರನ ವಾಹನ ಶಿವಮೊಗ್ಗ ಹಾಲು ಒಕ್ಕೂಟದ ಆವರಣಕ್ಕೆ ಬರುವ ಹಾಗು ಹೊರ ಹೋಗುವ ಇಲ್ಲವೇ ಆವರಣದಲ್ಲಿರುವ ಅನುಮತಿಯುಳ್ಳ ವ್ಯಕ್ತಿಯನ್ನು ಗಾಯಗೊಳಿಸುವುದು ಅಥವಾ ಸಾವಿಗೆ ಕಾರಣವಾಗದಂತೆ ಎಚ್ಚರಿಕೆ ವಹಿಸತಕ್ಕದ್ದು.

42. ಶಿವಮೊಗ್ಗ ಹಾಲು ಒಕ್ಕೂಟದ ಸಿಬ್ಬಂದಿಗೆ/ ಅನುಮತಿಯುಳ್ಳ ವ್ಯಕ್ತಿಗೆ ಉಂಟಾಗಬಹುದಾದ ಗಾಯ, ಅದರಿಂದ ಡೇರಿಯ ನೌಕರರ ಪರಿಹಾರ ನೀಡಿಕೆ ನಿಯಮದಡಿ ಇತರೆ ಯಾವುದೇ ಕಾನೂನಿನಡಿ ಜಾರಿಯಲ್ಲಿರುವ ನಿಬಂಧನೆ ಅಧಿನಿಯಮದಡಿ ಪರಿಹಾರ ಧನವನ್ನು ಗುತ್ತಿಗೆದಾರ ಭರಿಸತಕ್ಕದ್ದು.

43. ಈ ಗುತ್ತಿಗೆಯಡಿ ತನಗೆ ದತ್ತವಾಗಿರುವ ಹಕ್ಕು ಬಾಧ್ಯತೆಯನ್ನು ಇತರ ವ್ಯಕ್ತಿಗೆ ವಹಿಸಿಕೊಡತಕ್ಕದ್ದಲ್ಲ.

44. ಈ ಗುತ್ತಿಗೆಯಡಿ ಆತನಿಗೆ ವಹಿಸಿರುವ ಸಾಗಾಣಿಕೆ ಕಾಮಗಾರಿಯನ್ನು ನಿರ್ವಹಿಸಲು ವಿಫಲನಾದಲ್ಲಿ ಅಥವಾ ಸಾಗಾಣಿಕೆಯ ಪೂರ್ಣ ಕಾರ್ಯವನ್ನು ಕೈಗೊಳ್ಳದಿದ್ದಲ್ಲಿ ಅಥವಾ ಭಾಗಶಃ ನಿರ್ವಹಿಸದಿದ್ದಲ್ಲಿ ಶಿವಮೊಗ್ಗ ಹಾಲು ಒಕ್ಕೂಟವು ವಿಧಿಸಿರುವ ನಿಯಮ ನಿಬಂಧನೆಯಡಿ ಈ ಕೆಳಕಂಡಂತೆ ಕ್ರಮ ಕೈಗೊಳ್ಳಬಹುದಾಗಿದೆ.

ಎ) ಗುತ್ತಿಗೆಯನ್ನು ವಜಾ ಮಾಡಬಹುದು ಅಥವಾ ಯಾವುದೇ ಭಾಗದ ಕಾರ್ಯವನ್ನು ಅಥವಾ

ಬಿ) ಆಧಾರ ಮೊತ್ತವನ್ನು ಪೂರ್ಣ ಮುಟ್ಟುಗೋಲು ಅಥವಾ ಶಿವಮೊಗ್ಗ ಹಾಲು ಒಕ್ಕೂಟ ದಿಂದ ಉಂಟಾದ ನಷ್ಟದ ಪ್ರಮಾಣಕ್ಕೆ ಸರಿದೂಗಿಸುವಷ್ಟು ಹಾಗೂ ಅಥವಾ

ಸಿ) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ನಷ್ಟದ ಪ್ರಮಾಣವನ್ನು ಪಾವತಿಸುವಂತೆ ಗುತ್ತಿಗೆದಾರರಿಗೆ ಸೂಚಿಸುವುದು.

ಡಿ) ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ನಷ್ಟವನ್ನು ಗುತ್ತಿಗೆದಾರರು ಬೇರೆ ಮಾರ್ಗದಲ್ಲಿ ವಾಹನ ಒದಗಿಸಿದ್ದರೆ ಅದರಿಂದ ಸರಿದೂಗಿಸಿಕೊಳ್ಳಲಾಗುವುದು.

ಡಿ) ಈ ಕಾರಣದಿಂದಾಗಿ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾದ ಹೆಚ್ಚುವರಿ ವೆಚ್ಚವನ್ನು ಹಾಗೂ ಇಂತಹ ಸೇವೆಯನ್ನು ಇತರರಿಂದ ಪಡೆದುದಕ್ಕಾಗಿ ಆದ ಹೆಚ್ಚುವರಿ ವೆಚ್ಚದ ಮೊತ್ತವನ್ನು ಗುತ್ತಿಗೆದಾರನಿಂದ ಪಡೆಯತಕ್ಕದ್ದು.

45. ಡೈರಿ ಡಾಕ್ ಬಿಡುವ ಮುನ್ನ ಶುದ್ಧವಾದ ಸೋರಿಕೆಯಿಲ್ಲದ ಹಾಲಿನ ಪೊಟ್ಟಣಗಳನ್ನು ಮಾತ್ರ ಪಡೆದು ಡೀಲರ್‌ದಾರರಿಗೆ ಸರಬರಾಜು ಮಾಡುವುದು. ಸೋರಿಕೆಯಾದ ಹಾಲಿನ ಪೊಟ್ಟಣಗಳನ್ನು ಡೀಲರ್‌ಗೆ ಸರಬರಾಜು ಮಾಡಿದಲ್ಲಿ ಅದರಿಂದಾಗುವ ನಷ್ಟಕ್ಕೆ ಗುತ್ತಿಗೆದಾರರನ್ನೆ ಹೊಣೆಗಾರರನ್ನಾಗಿ ಮಾಡಲಾಗುವುದು. ಈ ರೀತಿಯ ನಷ್ಟದ ಮೊತ್ತವನ್ನು ಗುತ್ತಿಗೆದಾರರ ಸಾಗಾಣಿಕೆ ಹುಂಡಿಯಿಂದ ವಸೂಲಿ ಮಾಡಲು ಕ್ರಮಕೈಗೊಳ್ಳುವುದು.

46. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಅಕಾಲ ಮರಣಹೊಂದಿದಲ್ಲಿ ಸಾಗಾಣಿಕೆ ಗುತ್ತಿಗೆಯನ್ನು ಅವರ ವಾರಸುದಾರರಿಗೆ ಮುಂದುವರೆಸುವ ಅಥವಾ ನೀಡದಿರುವ ಹಕ್ಕು ನಿರ್ವಾಹಕ ನಿರ್ದೇಶಕರಿಗೆ ಕಾಯ್ದಿರಿಸಲಾಗಿದೆ. ಹಾಗು ಅಂತಹ ಸಂದರ್ಭಗಳಲ್ಲಿ ಅವರಿಗೆ ಡೇರಿಯ ವತಿಯಿಂದ ಪಾವತಿಸುವ ಹಣವೇನಾದರೂ ಇದ್ದಲ್ಲಿ ಇದನ್ನು ಕಾನೂನು ರೀತಿ ನಿಯಮಾನುಸಾರ ಪರಿಶೀಲಿಸಿ ಬಿಡುಗಡೆಗೊಳಿಸುವ ಅಧಿಕಾರವು ನಿರ್ವಾಹಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟದ ವಿವೇಚನೆಗೆ ಒಳಪಟ್ಟಿರುತ್ತದೆ.

47. ಗುತ್ತಿಗೆದಾರರು ಗುತ್ತಿಗೆ ಅವಧಿಯಲ್ಲಿ ಯಾವುದೇ ಅಪರಾಧ / ಕಾನೂನು ಉಲ್ಲಂಘನೆಗಳಲ್ಲಿ ಭಾಗಿಯಾಗಿರುವುದು ಕಂಡು ಬಂದಲ್ಲಿ ಇಂತವರ ಮೇಲೆ ಆರಕ್ಷಕ ಠಾಣೆ / ನ್ಯಾಯಾಲಯದಲ್ಲಿ ಮೊಕದ್ದಮೆಗಳೇನಾದರೂ ಇರುವುದು ಕಂಡುಬಂದಲ್ಲಿ ಇಂತಹ ಗುತ್ತಿಗೆದಾರರ ಗುತ್ತಿಗೆಯನ್ನು ಯಾವುದೇ ಮುನ್ಸೂಚನೆ ನೀಡದೆ ರದ್ದುಪಡಿಸುವ ಅಧಿಕಾರವು ನಿರ್ವಾಹಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟ ಕಾಯ್ದಿರಿಸಲಾಗಿದೆ. ಮತ್ತು ಅಂತಹವರ ಇಡುಗಂಟನ್ನು ಸಹ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

48. ಗುತ್ತಿಗೆಯ ವಾಹನ ಚಾಲಕರು/ಸಿಬ್ಬಂದಿಗಳು ಡೇರಿಯ ಆವರಣದೊಳಗಡೆ ಟೇಪ್‌ರಿಕಾರ್ಡರ್ / ಐ ಪಾಡ್ /ಹಾರ್ನ್ / ಮೊಬೈಲ್, ದೂರವಾಣಿ / ತಂಬಾಕು ವಗೈರೆ ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಈ ನಿಯಮವನ್ನು ಉಲ್ಲಂಘಿಸುವುದು ಕಂಡು ಬಂದಲ್ಲಿ ಸೂಕ್ತ ದಂಡ ವಿಧಿಸಲಾಗುವುದಲ್ಲದೆ ಡೇರಿಯ ನಿಯಮಗಳಂತೆ ಕ್ರಮ ಜರುಗಿಸಲಾಗುವುದು.

49. ಗುತ್ತಿಗೆ ಅವಧಿಯಲ್ಲಿ ಗುತ್ತಿಗೆದಾರರು ನೀಡಿರುವ ವಾಹನಕ್ಕೆ ಏಜೆಂಟರು ಹಾಗೂ ಗ್ರಾಹಕರ ಮಾಹಿತಿಗಾಗಿ ಗುರುತಿಗಾಗಿ ನಂದಿನಿ ಉತ್ಪನ್ನಗಳ ಜಾಹೀರಾತನ್ನು ಗುತ್ತಿಗೆ ವಾಹನಗಳಿಗೆ ಡೇರಿಯ ವತಿಯಿಂದ ಬರೆಸಲಾಗುವುದು. ಸದರಿ ಜಾಹೀರಾತನ್ನು ಗುತ್ತಿಗೆ ಅವಧಿಯವರೆವಿಗೂ ಕಾಪಾಡುವುದು ಗುತ್ತಿಗೆದಾರರ ಜವಾಬ್ದಾರಿಯಾಗಿರುತ್ತದೆ. ಒಂದು ವೇಳೆ ಗುತ್ತಿಗೆದಾರರ ಅಜಾಗರೂಕತೆಯಿಂದ ಜಾಹೀರಾತುಗಳು ಹಾಳಾದಲ್ಲಿ ಪುನಃ ಬರೆಸುವ ವೆಚ್ಚವನ್ನು ಸಾರಿಗೆ ಬಿಲ್ಲಿನಿಂದ ವಸೂಲಿ ಮಾಡಲು ಕ್ರಮ ಜರುಗಿಸಲಾಗುವುದು.

ದಂಡ : ಗುತ್ತಿಗೆದಾರನ ಕರ್ತವ್ಯ ಚ್ಯುತಿಗೆ ವಿಧಿಸಲಾಗಿರುವ ದಂಡ ಕೆಳಕಂಡಂತಿದೆ.

| **ಕ್ರ. ಸಂ.** | **ಕರ್ತವ್ಯ ಚ್ಯುತಿ** | **ಮೊದಲ ಕರ್ತವ್ಯ ಚ್ಯುತಿಗೆ** | **ನಂತರದ ಪ್ರತಿ ಕರ್ತವ್ಯ ಚ್ಯುತಿಗೆ** |
|---|---|---|---|
| 01 | ವಾಹನಗಳ ಮೇಲ್ಭಾವಣೆಯ ಒಳಭಾಗದಲ್ಲಿ ದೀಪ ಇಲ್ಲದಿರುವುದು, ಚಾಲಕನ ಸ್ಥಳಭಾಗದಲ್ಲಿ ದೀಪ ಇಲ್ಲದಿರುವುದು. | 100.00 | 100.00 |
| 02 | ಡೈರಿ/ಸಿ.ಸಿ.ಯಿಂದ ನೀಡುವ ಪತ್ರ ಸುತ್ತೋಲೆ ಸಂಘದ ಸಾಮಾಗ್ರಿಗಳನ್ನು ಪಶುಆಹಾರ ಮುಂತಾದುವುಗಳನ್ನು ಸಂಘಕ್ಕೆ ತಲುಪಿಸಿ ಸ್ವೀಕೃತಿ ಪತ್ರ ತರದೆ ಇರುವುದಕ್ಕೆ | 100.00 | 100.00 |
| 03 | ವಾಹನಕ್ಕೆ ನಿರ್ದಿಷ್ಟ ಬಣ್ಣ ಬಳಿಯುವ ಕಾರಣಕ್ಕೆ | 100.00 | 200.00 |
| 04 | ವಾಹನ ಕೆಟ್ಟುನಿಂತ ಕಾರಣ ಹಾಲು ಹಾಗೂ ಹಾಲಿನ ಉತ್ಪನ್ನವನ್ನು ಶಿವಮೊಗ್ಗ ಹಾಲು ಒಕ್ಕೂಟಕ್ಕೆ | 100.00 | 200.00 |

| | | |
|---|---|---|
| ಅ) ಪ್ರಸ್ತುತ ಜಾರಿಯಲ್ಲಿರುವ ಹಾಲು ಹಾಗೂ ಹಾಲಿನ ಉತ್ಪನ್ನದ ಮಾರಾಟದ ಬೆಲೆ ರೀತ್ಯಾ ನಷ್ಟದ ಮೊತ್ತವನ್ನು ಲೆಕ್ಕಾಚಾರ ಹಾಕಲಾಗುವುದು. ಶುದ್ಧ ಹಾಲಿನ ಪ್ಯಾಕೆಟ್ ಮೇಲೆ ಪ್ರತಿ ಲೀಟರ್‌ಗೆ 1.50 ಪೈಸೆಯಂತೆ ಸಂಸ್ಕರಣಾ ವೆಚ್ಚ ಹಿಂದಿರುಗಿಸುವುದರಿಂದ ಹಾಗೂ ಪ್ರಸ್ತುತ ಜಾರಿಯಲ್ಲಿರುವ ಹಾಲಿನ ಬೆಲೆ ಪ್ರಕಾರ | | |
| 05 | ಸರಿಯಾದ ಸಮಯಕ್ಕೆ ವಾಹನ ನೀಡದ ಕಾರಣ | ಆರಂಭದ 15 ನಿಮಿಷಕ್ಕೆ ರೂ. 50/– ನಂತರದ ಪ್ರತಿ 10 ನಿಮಿಷ ಹಾಗೂ ಭಾಗಶಃ ತಲಾ 100/– ರೂ ನಂತೆ |
| 06 | ಸ್ವಯಂ ಚಾಲನೆ ಇಲ್ಲದ ಕಾರಣ | ಆರಂಭದಲ್ಲಿ 3 ದಿನಗಳ ವಾಯಿದೆ ನೀಡಿ ಅಷ್ಟರಲ್ಲಿ ಸ್ವಯಂ ಚಾಲಕವನ್ನು ಅಳವಡಿಸಿಕೊಳ್ಳಲು ತಿಳುವಳಿಕೆ, ನಿಗಧಿತ ಅವಧಿಯಲ್ಲಿ ಅಳವಡಿಸದಿದ್ದರೆ ಪ್ರತಿ ದಿನ 25/– ರೂ. ದಂಡ ಅಳವಡಿಸುವವರೆಗೂ |
| 07 | ವಾಹನ ಕೆಟ್ಟು ನಿಂತಾಗ ತುರ್ತು ಸಂದರ್ಭದಲ್ಲಿ 2 ಮಾರ್ಗಕ್ಕೆ ಒಂದೇ ವಾಹನ | ಮೊದಲ ಬಾರಿ ದಂಡ ವಿಧಿಸದೇ ಸೂಚನೆ ನೀಡಲಾಗುವುದು. ನಂತರ ಹಾಗೂ ಮೇಲಿಂದ ಮೇಲೆ ಕರ್ತವ್ಯ ಲೋಪವಾದರೆ ಪ್ರತಿ ದಿನಕ್ಕೆ ರೂ. 200/– ರಂತೆ |

50. ದಿನನಿತ್ಯದ ವಾಹನ ಕೆಟ್ಟು ನಿಂತಾಗ ಅಪಘಾತ ಆದಾಗ ಇತರೆ ಅನಿರೀಕ್ಷಿತ ಸಂದರ್ಭ ಒದಗಿ ಬಂದಾಗ ಬದಲಿ ವಾಹನವನ್ನು ಗುತ್ತಿಗೆದಾರ ಒದಗಿಸಿದಾಗ, 42 ರ ನಿಯಮದಡಿ ಹಾಗೂ ಉಪನಿಯಮ 1,2,3 ರ ಅಡಿಯಲ್ಲಿ ದಂಡವನ್ನು ವಿಧಿಸಲಾಗುವುದಿಲ್ಲ. ಬದಲಿ ವಾಹನವನ್ನು ಒದಗಿಸಿದ್ದರೂ ಉಳಿದ ಉಪನಿಬಂಧನೆ 4 ರಿಂದ 8 ರ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು.

51. ಗುತ್ತಿಗೆ ಅವಧಿಯಲ್ಲಿ ಹಾಲು ಸಾಗಾಣಿಕಾ ಕಾರ್ಯಕ್ಕೆ ಯಾವುದೇ ದಿನ ವಾಹನವನ್ನು ಒದಗಿಸುವಲ್ಲಿ ವಿಫಲವಾದರೆ, ಶಿವಮೊಗ್ಗ ಹಾಲು ಒಕ್ಕೂಟವು ಅಂದಿನ ಕಾರ್ಯಕ್ಕೆ ಮಾಡಿದ ಸಾರಿಗೆ ವೆಚ್ಚ ಹಾಗೂ ಪ್ರತಿ ಟ್ರಿಪ್‌ಗೆ ದಂಡ ವಿಧಿಸಲಾಗುವುದು.

52. ಗುತ್ತಿಗೆದಾರರ ವಾಹನಗಳನ್ನು ಪರಿಶೋಧಿಸಿದಾಗ, ವಾಹನದಲ್ಲಿ ಗೇಟ್ ಪಾಸ್/ ಇನ್‌ವಾಯ್ಸ್ / ಸೇಲ್ಸ್ ಶೀಟ್‌ಗಿಂತ ಹೆಚ್ಚುವರಿ ಹಾಲು ಮತ್ತು ಹಾಲಿನ ಉತ್ಪನ್ನಗಳು, ಕ್ರೇಟುಗಳು, ಕ್ಯಾನುಗಳು ಅಥವಾ ಡೇರಿಗೆ ಸಂಬಂಧಿಸಿದ ವಸ್ತುಗಳು ಅನಧಿಕೃತವಾಗಿ ರವಾನೆಯಾಗತ್ತಿದ್ದಲ್ಲಿ, ಅದನ್ನು ವಶಪಡಿಸಿಕೊಂಡು ದಂಡ ವಿಧಿಸಲಾಗುವುದು. ಇಂತಹ ತಪ್ಪುಗಳು ಪುನರಾವರ್ತನೆಯಾದಲ್ಲಿ ಹೆಚ್ಚಿನ ದಂಡ ವಿಧಿಸಲಾಗುವುದಲ್ಲದೆ ದಂಡದ ಜೊತೆಗೆ ಗುತ್ತಿಗೆಯನ್ನು ರದ್ದುಪಡಿಸಲಾಗುವುದು.

53. ಚಾಲಕನಿಗೆ /ಲೋಡರ್‌ಗಳಿಗೆ ಡೇರಿಯೊಳಗೆ ಪ್ರವೇಶ ಅನುಮತಿ ಪತ್ರ ನೀಡುವ ಸಲುವಾಗಿ ಚಾಲಕನ /ಲೋಡರ್‌ಗಳ ಪಾಸ್ ಪೋರ್ಟ್ ಅಳತೆಯ ಎರಡು ಭಾವ ಚಿತ್ರಗಳು, ಹೆಸರು, ವಿಳಾಸವನ್ನು ಹೊಂದಿರುವ ಗುರುತಿನ ಚೀಟಿ ಗುತ್ತಿಗೆದಾರರು ನೀಡತಕ್ಕದ್ದು.

54. ಅಂತಿಮ ಹಣ ಪಾವತಿ ಮುನ್ನ ಇತ್ತೀಚಿನ ವರಮಾನ ತೆರಿಗೆ ಪ್ರಮಾಣ ಪತ್ರ/ವೃತ್ತಿ ತೆರಿಗೆ ಪ್ರಮಾಣ ಪತ್ರ ಒದಗಿಸತಕ್ಕದ್ದು.

55. ಗುತ್ತಿಗೆದಾರರು ವೃತ್ತಿ ತೆರಿಗೆ ನೋಂದಣಿ ಮಾಡಿಸಿ ಸರ್ಕಾರವು ನಿಗಧಿಪಡಿಸಿರುವ ವೃತ್ತಿ ತೆರಿಗೆಯನ್ನು ಸರ್ಕಾರಕ್ಕೆ ಪಾವತಿ ಮಾಡಿರಬೇಕು. ತಪ್ಪಿದ್ದಲ್ಲಿ ಸರ್ಕಾರದಿಂದ ನಿಗದಿಪಡಿಸಿರುವ ವೃತ್ತಿ ತೆರಿಗೆಯನ್ನು ಸಾರಿಗೆ ಗುತ್ತಿಗೆದಾರರ ಬಿಲ್ಲಿನಲ್ಲಿ ಕಠಾಯಿಸಿ ಸರ್ಕಾರಕ್ಕೆ ಪಾವತಿಸಲಾಗುವುದು.

56. ಗುತ್ತಿಗೆದಾರ ನಿಯಮ ನಿಬಂಧನೆಗೆ ಭಂಗ ತಂದಿದ್ದೇ ಆದರೆ, ಗುತ್ತಿಗೆ ರದ್ದಾಗುತ್ತದೆಂದು ಅರಿತವನಾಗಿರಬೇಕು. ನಿಬಂಧನೆ ಭಂಗದಿಂದಾಗಿ ಶಿವಮೊಗ್ಗ ಹಾಲು ಒಕ್ಕೂಟಕ್ಕೆ ಉಂಟಾಗಬಹುದಾದ ನಷ್ಟವನ್ನು ಭರಿಸುವ ಮತ್ತು ಶಿವಮೊಗ್ಗ ಹಾಲು ಒಕ್ಕೂಟವು ಆಧಾರ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವುದರ ಬಗ್ಗೆ ಗುತ್ತಿಗೆದಾರ ಅರಿತವನಾಗಿರಬೇಕು.

57. ಗುತ್ತಿಗೆದಾರರು ಪ್ರತಿ ತಿಂಗಳು ತಮ್ಮ ಗುತ್ತಿಗೆ ಹಣ ಪಡೆಯುವ ಸಲುವಾಗಿ ಎಸ್.ಬಿ.ಎಂ./ಕೆನರಾ ಯಾವುದೇ ಶಾಖೆಯ ಬ್ಯಾಂಕಿನಲ್ಲಿ ಖಾತೆ ಉಳ್ಳವರಾಗಿರಬೇಕು ಹಾಗೂ ಪಾನ್ ಕಾರ್ಡ್ ಹೊಂದಿದ್ದು, ಬಿಲ್‌ನ ಮೇಲೆ ಪಾನ್ ನಂ. ನಮೂದಿಸತಕ್ಕದ್ದು.

58. ಈ ಗುತ್ತಿಗೆಯಿಂದ ಎದುರಾಗಬಹುದಾದ ಎಲ್ಲಾ ವಿವಾದಗಳನ್ನು ನಿರ್ವಾಹಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟರವರ ಗಮನಕ್ಕೆ ತರತಕ್ಕದ್ದು ಅವರೇ ಈ ಸಮಸ್ಯೆಯ ಇತ್ಯರ್ಥದ ಬಗ್ಗೆ ಪರಮಾಧಿಕಾರ ಉಳ್ಳವರಾಗಿದ್ದ ಅವರ ನಿರ್ಧಾರವೇ ಅಂತಿಮವಾದುದೂ ಆಗಿದೆ.

59. ಮೇಲಿನ ನಿಯಮಗಳಿಗೆ ಇತರೆ ನಿಯಮಗಳನ್ನು ಸೇರಿಸುವ ಅಥವಾ ಕಳೆಯುವ ಮತ್ತು ವ್ಯತ್ಯಯಗೊಳಿಸುವ ಅಧಿಕಾರವನ್ನು ಶಿವಮೊಗ್ಗ ಹಾಲು ಒಕ್ಕೂಟವು ಕಾಯ್ದಿರಿಸಿಕೊಂಡಿದೆ.

60. ಯಾವುದೇ ಗುತ್ತಿಗೆದಾರರು ಸಕಾರಣದಿಂದ ಗುತ್ತಿಗೆಯನ್ನು ರದ್ದುಗೊಳಿಸಲು ಇಚ್ಛಿಸಿದಲ್ಲಿ ಸದರಿಯವರು 65 ದಿನಗಳ ಮುಂಚಿತವಾಗಿ ಲಿಖಿತ ಮೂಲಕ ಡೇರಿಗೆ ತಿಳಿಸತಕ್ಕದ್ದು, ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಸದರಿ ಮನವಿಯನ್ನು ಪರಿಗಣಿಸಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆಯನ್ನು ರದ್ದುಗೊಳಿಸುವ ಅಧಿಕಾರ ಹೊಂದಿರುತ್ತಾರೆ.

61. ಗುತ್ತಿಗೆದಾರರು ನಿಯಮ ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ ಗುತ್ತಿಗೆ ರದ್ದು ಮಾಡಲು ಶಿವಮೊಗ್ಗ ಹಾಲು ಒಕ್ಕೂಟದ ನಿರ್ವಾಹಕ ನಿರ್ದೇಶಕರು ಅಧಿಕಾರ ಉಳ್ಳವರಾಗಿರುತ್ತಾರೆ. ಗುತ್ತಿಗೆ ರದ್ದುಪಡಿಸಿದಲ್ಲಿ ಆಗುವ ನಷ್ಟಕ್ಕೆ ಗುತ್ತಿಗೆದಾರನೇ ಜವಾಬ್ದಾರನಾಗಿದ್ದು ಅದನ್ನು ವಸೂಲಿ ಮಾಡುವ/ ಸರಿಪಡಿಸುವ ಅಧಿಕಾರ ನಿರ್ವಾಹಕ ನಿರ್ದೇಶಕರು, ಶಿವಮೊಗ್ಗ ಹಾಲು ಒಕ್ಕೂಟರವರಿಗೆ ಇರುತ್ತದೆ.

ಟೆಂಡರ್‌ದಾರರ ಸಹಿ ಮತ್ತು ಹೆಸರು
(ದಪ್ಪ ಅಕ್ಷರಗಳಲ್ಲಿ)

# ಸಾರಿಗೆದಾರರ ಪೂರ್ಣ ಮಾಹಿತಿ

| | | |
|---|---|---|
| 1 | ಸಾರಿಗೆದಾರರ ಹೆಸರು | : |
| 2 | ವಿಳಾಸ ದೂರವಾಣಿ ಸಂಖ್ಯೆ / ಫ್ಯಾಕ್ಸ್ ಸಂಖ್ಯೆ / ಮೊಬೈಲ್ ಸಂಖ್ಯೆ | : |
| 3 | ನೀವು ಕಂಪನಿ ಪಾಲುದಾರರಾಗಿದ್ದಲ್ಲಿ ಅದರ ಪೂರ್ಣ ಮಾಹಿತಿ | : |
| 4. | ಸಾರಿಗೆ ಕಾರ್ಯ ಪ್ರಾರಂಭಿಸಿದ ವರ್ಷ ನೀವು ವ್ಯವಹರಿಸುವ ಬ್ಯಾಂಕಿನ ವಿಳಾಸ ಮತ್ತು ಖಾತೆ ಸಂಖ್ಯೆ | : |
| 5. | ನಿಮ್ಮ ಹೆಸರಿನಲ್ಲಿ ಅಥವಾ ಕಂಪನಿ ಹೆಸರಿನಲ್ಲಿ ಹೊಂದಿರುವ ವಾಹನಗಳ ಸಂಖ್ಯೆ | : |
| 6. | ಗುತ್ತಿಗೆ ನಿರ್ವಹಿಸಲು ಇಚ್ಛಿಸುವ ಮಾರ್ಗದ ಹೆಸರು/ ಸಂಖ್ಯೆ | : |
| 7. | ಮಾರ್ಗಕ್ಕೆ ಒದಗಿಸುವ ವಾಹನ ಸಂಖ್ಯೆ ಮತ್ತು ದಾಖಲಾತಿ ಪ್ರತಿಗಳು<br><br>ಆರ್.ಸಿ. ಇನ್ಸೂರೆನ್ಸ್ ತೆರಿಗೆ ಇತ್ಯಾದಿಗಳು | : |
| 8. | ಈ ಕೆಳಗಿನ ಮಾಹಿತಿಗಳಿದ್ದಲ್ಲಿ ಲಗತ್ತಿಸುವುದು | : |

ಎ) ಆದಾಯ ತೆರಿಗೆ ಪ್ರಮಾಣ ಪತ್ರ

ಬಿ) ಬ್ಯಾಂಕರ್ ಸಾಲ್ವೆನ್ಸ ಪ್ರಮಾಣ ಪತ್ರ

1) ವೃತ್ತಿ ತೆರಿಗೆ ನೋಂದಣಿ ಪತ್ರ

**ತಮ್ಮ ವಿಶ್ವಾಸಿ,**

**ಟೆಂಡರ್‌ದಾರರ ಸಹಿ ಮತ್ತು ವಿಳಾಸ**

ಮೇಲ್ಕಂಡ ಮಾಹಿತಿಗಳು ಸತ್ಯಪೂರ್ಣವಾಗಿದ್ದು ಏನಾದೂ ಬದಲಾವಣೆಗಳು ಆದಲ್ಲಿ ಕೂಡಲೇ ವರದಿ ಮಾಡಲಾಗುವುದು ಹಾಗೂ ಕಾಲಕಾಲಕ್ಕೆ ಆಗುವ ಬದಲಾವಣೆ ಬಗ್ಗೆ ತಿಳಿಸಲಾಗುವುದು.

ಟೆಂಡರ್‌ದಾರರ ಸಹಿ,

# ಘೋಷಣಾ ಪತ್ರ

ದಿನಾಂಕ :

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ.**

ಮಾನ್ಯರೇ,

ವಿಷಯ ಃ ಟೆಂಡರ್‌ನಲ್ಲಿ ಬಿಡ್ ಮಾಡುವ ಬಗ್ಗೆ.

ಉಲ್ಲೇಖ ಃ ಟೆಂಡರ್ ಪ್ರಕಟಣೆ ಸಂಖ್ಯೆ: **ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೀಮತಾಂ/ ಟೆಂಡರ್/08/4146/2019-20 ದಿನಾಂಕ: 29.08.2019**

.****

ಮೇಲಿನ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಹಾಲು ಸಾಗಾಣಿಕೆಗಾಗಿ ದ್ವೈವಾರ್ಷಿಕ ಗುತ್ತಿಗೆಗೆ ಸಂಬಂಧಿಸಿದ ಬಿಡ್ ನಿಯಮಾವಳಿಗಳ ಮಾಹಿತಿಗಳನ್ನು ತಿಳಿದು ಹಾಗೂ ಅನುಬಂಧ 'ಬಿ' 'ಸಿ' 'ಡಿ' ನಲ್ಲಿರುವ ಷರತ್ತು ಮತ್ತು ನಿಬಂಧನೆಗಳನ್ನು ಓದಿ, ಅರ್ಥ ಮಾಡಿಕೊಂಡಿದ್ದು ಟೆಂಡರ್‌ನಲ್ಲಿ ಭಾಗವಹಿಸುತ್ತಿದ್ದೇನೆ. ಟೆಂಡರ್‌ಗೆ ಮೂಲತಃ ಅವಶ್ಯಕತೆ ಇರುವ ಇ.ಎಂ.ಡಿ. (ಬಿಡ್ಡು ಠೇವಣಿ) ಯನ್ನು ಇ-ಪ್ರೋಕ್ಯೂರ್‌ಮೆಂಟ್ ನಿಯಮಾವಳಿಯಂತೆ ಸಲ್ಲಿಸಿದೆ. ಮಾರ್ಗಕ್ಕೆ ಸಂಬಂಧಿಸಿದ ವಾಹನದ ದಾಖಲಾತಿ ಪ್ರತಿಗಳನ್ನು ಸಹ ಲಗತ್ತಿಸಲಾಗಿದೆ/ಟೆಂಡರ್ ಒಪ್ಪಿಗೆಯಾದಲ್ಲಿ ಟೆಂಡರ್ ಪ್ರಕಟಣೆಯಲ್ಲಿ ಸೂಚಿಸಿದ ಸಾಮರ್ಥ್ಯದ / ಮಾದರಿಯ ಸೂಕ್ತ ವಾಹನ ಖರೀದಿಸಿ ನೀಡಲಾಗುವುದು. ಮತ್ತು ವಾಹನಕ್ಕೆ FSSAI ನೊಂದಣಿ ಮಾಡಿಸಲಾಗುವುದು.

ಮೊತ್ತ ರೂ. ......................................... (ರೂಪಾಯಿ .......................................ಗಳು ಮಾತ್ರ) ಬ್ಯಾಂಕ್ ..............................................................................

ವಂದನೆಗಳೊಂದಿಗೆ,

ಟೆಂಡರ್ ಅರ್ಜಿ ಸಲ್ಲಿಸಿದ
ಮಾರ್ಗದ ಹೆಸರು :

ಟೆಂಡರ್‌ದಾರರ ಸಹಿ,

ವಿಳಾಸ

## ಪಟ್ಟಿ ಪರಿಶೀಲನೆ (ಚೆಕ್ ಲೀಸ್ಟ್)

## ಹಾಲು ಸಾಗಾಣಿಕೆಗಾಗಿ/ಕಾರು/ದ್ರವಸಾರಜನಕ ವಿತರಣೆಗಾಗಿ ಟೆಂಡರ್

| | | | | |
|---|---|---|---|---|
| 01 | ನಿಗದಿತ ಇ.ಎಂ.ಡಿ.ಮೊತ್ತ ಸಲ್ಲಿಸಲಾಗಿದೆಯಾ ? | : | ಹೌದು | ಇಲ್ಲ |
| 02 | ಸಾರಿಗೆದಾರರ ಪೂರ್ಣ ಮಾಹಿತಿ (ಬಯೋಡಾಟಾ) ಸಲ್ಲಿಸಲಾಗಿದೆಯೇ ? | : | ಹೌದು | ಇಲ್ಲ |
| 03 | ಗುತ್ತಿಗೆಗೆ ನೀಡುವ ವಾಹನದ ದಾಖಲಾತಿ ಪ್ರತಿ ಲಗತ್ತಿಸಲಾಗಿದೆಯೇ? | : | ಹೌದು | ಇಲ್ಲ |
| 04 | ಆದಾಯ ತೆರಿಗೆ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೇ ? | : | ಹೌದು | ಇಲ್ಲ |
| 05 | ವೃತ್ತಿ ತೆರಿಗೆ ನೋಂದಣಿ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೋ ? | : | ಹೌದು | ಇಲ್ಲ |
| 06 | ಬ್ಯಾಂಕರ್ ಸಾಲ್ವೆನ್ಸ್ ಪ್ರಮಾಣ ಪತ್ರ ಲಗತ್ತಿಸಲಾಗಿದೆಯೇ ? | : | ಹೌದು | ಇಲ್ಲ |
| 07 | ವಾಣಿಜ್ಯ ಟೆಂಡರ್ ದರಪಟ್ಟಿಯನ್ನು ಭಾಗ–2 ರಲ್ಲಿ ಅಕ್ಷರ ಮತ್ತು ಪದಗಳನ್ನು ದರಗಳನ್ನು ನಮೂದಿಸಿದೆಯೇ | : | ಹೌದು | ಇಲ್ಲ |

**ಎಚ್ಚರಿಕೆ :** ನಿಗದಿಪಡಿಸಿರುವ ಇ.ಎಂ.ಡಿ. ಮೊತ್ತವನ್ನು ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಪ್ರಕಾರ ಪಾವತಿಸತಕ್ಕದು. ಪಾವತಿಸದಿದ್ದಲ್ಲಿ ಟೆಂಡರ್ ನಿಯಮದ ಪ್ರಕಾರ ಟೆಂಡರ್ ಅರ್ಜಿ ರದ್ದಾಗುತ್ತದೆ.

ಟೆಂಡರ್‌ದಾರರ ಸಹಿ ಮತ್ತು ಮೊಹರು

ದಿನಾಂಕ :

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ
ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : 246161, 246165.
ದೂರವಾಣಿ ಸಂಖ್ಯೆ:08182-246165 E-Mail:shimulpandi@gmail.com Fax:08182-246284.

# ವಾಣಿಜ್ಯ ಟೆಂಡರ್ ಭಾಗ –2

**ಟೆಂಡರ್‌ದಾರರು ವಾಣಿಜ್ಯ ಟೆಂಡರ್ ದಾಖಲಾತಿಗಳನ್ನು ಮತ್ತು ಇ.ಎಂ.ಡಿ. ಮೊತ್ತವನ್ನು ಪಾವತಿಸಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮುಖಾಂತರವೇ ಅಪ್‌ಲೋಡ್ ಮಾಡತಕ್ಕದ್ದು.**

**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**
**ಮಾಚೇನಹಳ್ಳಿ ನಿದಿಗೆ ಅಂಚೆ ಶಿವಮೊಗ್ಗ – 577 222. ದೂರವಾಣಿ : (08182) 246161, 246165**

# ವಾಣಿಜ್ಯ ಟೆಂಡರ್

## ದ್ವೈವಾರ್ಷಿಕ ದರ ಗುತ್ತಿಗೆ

ಕ್ಲೋಸ್ಡ್ ಟಾರ್ಪಲಿನ್ ಅಳವಡಿಸಿದ ವಾಹನಗಳಿಂದ ಕಚ್ಚಾ ಹಾಲು ಹಾಗೂ ಕಾರು/ದ್ರವಸಾರಜನಕ ವಿತರಣೆಗಾಗಿ/ಸಾಗಾಣಿಕೆ ಮಾಡಲು ಹಾಗೂ ವಿವಿಧ ಸಾಮಾರ್ಥ್ಯದ ವಾಹನಗಳನ್ನು ಮತ್ತು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ವಾಣಿಜ್ಯ ಟೆಂಡರ್.

## ವಾಣಿಜ್ಯ ಟೆಂಡರ್ ಭಾಗ—2

| | | |
|---|---|---|
| 1 | ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ | **0309.2019 ರಿಂದ** |
| 2 | ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | 03.10.2019 ರಂದು ಸಂಜೆ: 17.30 ಗಂಟೆಯುವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | **05.10.2019** ರಂದು ಬೆಳಿಗ್ಗೆ**: 11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | **09.10.2019** ರಂದು ಬೆಳಿಗ್ಗೆ**: 11.30** ಗಂಟೆಗೆ |

# ವಾಣಿಜ್ಯ ಟೆಂಡರ್ ಭಾಗ – 2

## ಅರ್ಹತೆ

ತಾಂತ್ರಿಕ ಟೆಂಡರ್‌ನ ಭಾಗ –1 ರಲ್ಲಿನ ನಿಯಮಾವಳಿಗಳ ಷರತ್ತು ಮತ್ತು ನಿಬಂಧನೆಗಳನ್ನು ಸಂಪೂರ್ಣವಾಗಿ ಯಾರು ಪೂರೈಸುತ್ತಾರೋ ಅಂತಹ ಬಿಡ್ಡುದಾರರ ವಾಣಿಜ್ಯ ಟೆಂಡರ್‌ನ್ನು ಅಂಗೀಕರಿಸಿ ಅಂತಿಮವಾಗಿ ತೆರೆಯಲಾಗುವುದು. ಅರ್ಹತೆ ಪಡೆಯದ ಇತರೆ ವಾಣಿಜ್ಯ ಟೆಂಡರ್‌ಗಳನ್ನು ಸಾರಾಸಗಟಾಗಿ ತಿರಸ್ಕರಿಸಲಾಗುವುದು.

ಸದರಿ ನಿಯಮಗಳ ಷರತ್ತು ಮತ್ತು ನಿಬಂಧನೆಗಳಿಗೆ ನಾನು ಬದ್ಧನಾಗಿರುತ್ತೇನೆ.

ಟೆಂಡರ್‌ದಾರರ ಸಹಿ
ಹೆಸರು
ಮತ್ತು ಮೊಹರು

ವಿಳಾಸ :

ಹೆಸರು : ......................................................

ತಂದೆಯ ಹೆಸರು : ..........................................

ವಿಳಾಸ :.......................................................

...................................................................

...............................ಪಿನ್ ಕೋಡ್...................

ದೂರವಾಣಿ ಸಂ: ..........................................

## ದರಪಟ್ಟಿ

**ದಿನಾಂಕ :**

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**
**ಮಾಚೇನಹಳ್ಳಿ ನಿದಿಗೆ ಅಂಚೆ**
**ಶಿವಮೊಗ್ಗ.**
ಮಾನ್ಯರೇ,

**ಉಲ್ಲೇಖ :** ಟೆಂಡರ್ ಪ್ರಕಟಣೆ ಸಂಖ್ಯೆ: **ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/08/4146/2019–20 ದಿನಾಂಕ: 29.08.2019**

ಮೇಲಿನ ಉಲ್ಲೇಖದನ್ವಯ ನಾನು / ನಾವು ಹಾಲನ್ನು ಕೆಳಗೆ ನಮೂದಿಸಿರುವ ಮಾರ್ಗಗಳಲ್ಲಿ ಸಾಗಾಣಿಕೆ ಮಾಡಲ/ ವಾಹನ ಒದಗಿಸಲು ನನ್ನ /ನಮ್ಮ ದರಪಟ್ಟಿ ಸಲ್ಲಿಸಿರುತ್ತೇನೆ/ತ್ತೇವೆ.

| ಮಾರ್ಗದ ಹೆಸರು/ಸಂಖ್ಯೆ | ಮಾರ್ಗದ ಅಂದಾಜು ಕಿ.ಮೀ ದಿನಕ್ಕೆ | ಟೆಂಡರ್‌ಗಾಗಿ ಸೂಚಿಸಿರುವ ದರ ಪ್ರತಿ ಕಿ.ಮೀ.ಗೆ ರೂ. ಪೈ. |
|---|---|---|
| | | ರೂ. ಪೈ.<br>ರೂ.................................. (ಅಕ್ಷರಗಳಲ್ಲಿ).........<br>..................................................................) |

ನಾನು/ನಾವು ಮತ್ತೊಮ್ಮೆ ದೃಢೀಕರಿಸಿರುವಂತೆ ನಾನು/ನಾವು ಕಾಮಗಾರಿಯ ವಿವರಗಳನ್ನು ಅಭ್ಯಸಿಸಿರುತ್ತೇವೆ. ಹಾಗೂ ಕಾಮಗಾರಿಯ ನಿಯಮ ನಿಬಂಧನೆಗಳನ್ನು, ವಿವರ ಮಾಹಿತಿಗಳನ್ನು ಮಾರ್ಗಸೂಚಿಗಳನ್ನು ಹಾಗೂ ಇತರೆ ಅಗತ್ಯ ವಿಷಯಗಳನ್ನು ಅರ್ಥ ಮಾಡಿಕೊಂಡಿರುತ್ತೇನೆ/ತ್ತೇವೆ. ನಾನು/ನಾವು ಕಾಮಗಾರಿಯ ರೀತಿ ನೀತಿಗಳನ್ನು ಸಂಪೂರ್ಣ ಅರಿತವನಾಗಿರುತ್ತೇನೆ. ಹಾಗೂ ಇದಕ್ಕೆ ಅನುಗುಣವಾಗಿಯೇ ದರಪಟ್ಟಿಯನ್ನು ಸಲ್ಲಿಸಿರುತ್ತೇನೆ. ಮೇಲೆ ತಿಳಿಸಿರುವ ದರಗಳು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. (ಆದಾಯ ತೆರಿಗೆ (ಟಿಡಿಎಸ್) ವೃತ್ತಿ ತೆರಿಗೆ ಹಾಗೂ ಚಾಲ್ತಿಯಲ್ಲಿರುವ ಇತರೆ ತೆರಿಗೆ ಮತ್ತು ರಾಜ್ಯ/ರಾಷ್ಟ್ರೀಯ ಹೆದ್ದಾರಿ ಶುಲ್ಕಗಳು ಸೇರಿರುತ್ತದೆ

ಗುತ್ತಿಗೆಗೆ ಸಂಬಂಧಪಟ್ಟಂತೆ ನಿಯಮ ನಿಬಂಧನೆಗಳನ್ನು ಕುರಿತಾಗಿ ಉಂಟಾಗಬಹುದಾದ ಯಾವುದೇ ತಂಟೆ/ತಕರಾರಿಗೆ ಶಿವಮೊಗ್ಗ ಹಾಲು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ನೀಡುವ ತೀರ್ಮಾನವೇ ಅಂತಿಮ ಎನ್ನುವ ವಿಷಯಕ್ಕೆ ನಾನು/ನಾವು ಬದ್ಧರಾಗಿರುತ್ತೇನೆ/ತ್ತೇವೆ.

ಟೆಂಡರ್‌ದಾರರ ಸಹಿ
ಹೆಸರು
ತಂದೆ ಹೆಸರು

**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/08/4146/2019–20 **ದಿನಾಂಕ: 29.08.2019**

**ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘಗಳಿಂದ ಹಾಲು ಸಾಗಾಣಿಕೆ ಮತ್ತು ಹುಲ್ಲಿನ ಬೀಜ/ಪಶುಮೇವು ಸರಬರಾಜು ಮಾಡಲು ಟಾರ್ಪಲ್ ಮುಚ್ಚಿದ ಬಾಡಿಯುಳ್ಳ 2010 ಅಥವಾ ನಂತರದ ಮಾದರಿಯ ವಿವಿಧ ಸಾಮರ್ಥ್ಯದ ಸರಕು ಸಾಗಾಣಿಕೆ ಮ್ಯಾಕ್ಸ್ ಪಿಕ್‌ಅಪ್/ಬೋಲೆರೊ ಪಿಕ್‌ಅಪ್ /ಲಘು ವಾಹನಗಳನ್ನು ಹಾಗೂ ಶಿವಮೊಗ್ಗ ಡೇರಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ವಿತರಣೆ ಮಾಡಲು ಇನ್ಸೂಲೇಟೆಡ್ ಬಾಡಿಯುಳ್ಳ 2010 ರ ಅಥವಾ ನಂತರದ ಮಾದರಿಯ ಸರಕು ಸಾಗಾಣಿಕೆ ವಾಹನವನ್ನು ಮತ್ತು ಸಂಚಾರಿ ಪಶುವೈದ್ಯಕೀಯ/ಕಚೇರಿ ಕ್ಷೇತ್ರ ಕೆಲಸ ಕಾರ್ಯಗಳಿಗೆ 2015 ರ ಅಥವಾ ನಂತರದ ಮಾದರಿಯ ಟಾಟಾ ವಿಸ್ತಾ/ಇಂಡಿಗೋ/ ಟಯೋಟ ಇಟಿಯೋಸ್/ಜೆಸ್ಟ್/ಸ್ವಿಫ್ಟ್ ಡೀಸೆರ್ ಕಾರುಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಒಕ್ಕೂಟಕ್ಕೆ ಒದಗಿಸಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ** | **ದಿನಾಂಕ: 03.09.2019 ರಿಂದ** |
| 2 | **ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ** | **ದಿನಾಂಕ: 03.10.2019 ರಂದು ಸಂಜೆ: 17.30 ಗಂಟೆಯವರೆಗೆ** |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ** | **ದಿನಾಂಕ: 05.10..2019 ರಂದು ಬೆಳಿಗ್ಗೆ: 11.30 ಗಂಟೆಗೆ** |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ** | **ದಿನಾಂಕ: 09.10.2019 ರಂದು ಬೆಳಿಗ್ಗೆ: 11.30 ಗಂಟೆಯ ನಂತರ** |

ಈ ಕೆಳಗೆ ನಮೂದಿಸಿರುವ ಹಾಲು ಶೇಖರಣಾ/ವಿತರಣಾ/ಹುಲ್ಲಿನ ಬೀಜ/ಪಶುಮೇವು ಸಾಗಾಣಿಕೆ ಮಾರ್ಗಗಳಿಗೆ ಟಾರ್ಪಾಲ್ ಮುಚ್ಚಿದ/ಇನ್ಸೂಲೇಟೆಡ್ ಬಾಡಿಯುಳ್ಳ ವಿವಿಧ ಸಾಮರ್ಥ್ಯದ **2010** ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ಸರಕು ಸಾಗಾಣಿಕೆ ವಾಹನಗಳನ್ನು **ಎರಡು ವರ್ಷದ ಅವಧಿ ಅಥವಾ ಮಾರ್ಗದ ವ್ಯಾಪ್ತಿಯ ಸಂಘದಲ್ಲಿ ಬಿ.ಎಂ.ಸಿ. ಕೇಂದ್ರ ಪ್ರಾರಂಭವಾಗುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ** ಒದಗಿಸಲು ಮತ್ತು ಸಂಚಾರಿ ಪಶುವೈದ್ಯಕೀಯ/ಮಾರುಕಟ್ಟೆ ವಿಭಾಗದ ಮಾರ್ಗಗಳಿಗೆ 2015 ರ ಅಥವಾ ನಂತರದ ಮಾದರಿಯ ಟಾಟಾ ವಿಸ್ತಾ/ಇಂಡಿಗೋ/ಟಯೋಟ ಇಟಿಯೋಸ್/ಜೆಸ್ಟ್/ಸ್ವಿಫ್ಟ್ ಡೀಸೆರ್ ಕಾರುಗಳನ್ನು **ಬಾಡಿಗೆ ಮತ್ತು ಗುತ್ತಿಗೆ ಆಧಾರದ ಮೇಲೆ ಒದಗಿಸಲು ವಾಹನ ಮಾಲೀಕರಿಂದ ಟೆಂಡರ್ ಕರೆಯಲಾಗಿದೆ. :–**

| ಮಾರ್ಗದ ಸಂಖ್ಯೆ | ಹಾಲು ಶೇಖರಣಾ/ದ್ರವಸಾರಜನಕ/ಕಾರಿನ ಮಾರ್ಗದ ಹೆಸರು/ವಿವರ | ವಾಹನ ಸಾಮರ್ಥ್ಯ ಟನ್‌ಗಳಲ್ಲಿ/ಮಾದರಿ | ದಿನದ ಅಂದಾಜು ಅಂತರ ಕಿ.ಮೀ (ಎರಡುಸರತಿಯಿಂದ) | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 1 | ಪರಶುರಾಂಪುರ –4 ಹಾಲು ಶೇಖರಣಾ ಮಾರ್ಗ:– ಚಳ್ಳಕೆರೆ ಶೀತಲೀಕರಣ ಕೇಂದ್ರದಿಂದ ನರಹರಿನಗರ, ನಗರಂಗೆರೆ, ಹೊಟ್ಯಾಪ್ಪನಹಳ್ಳಿ, ಜಿ.ಪಿ.ಡಿ.ಎಫ್, ಗೊರ್ಲಕಟ್ಟೆ, ಚಳ್ಳಕೆರೆ ಶೀತಲೀಕರಣ ಕೇಂದ್ರ | 2.5 ಟನ್ | 60 ಕಿ.ಮೀ | 30,000/– | 40,000/– |
| 2 | ತೇರುಮಲ್ಲೇಶ್ವರ–3 ಹಾಲು ಶೇಖರಣಾ ಮಾರ್ಗ :– ಚಿತ್ರದುರ್ಗ ಶೀತಲೀಕರಣ ಕೇಂದ್ರದಿಂದ ಅಮ್ಮನಹಟ್ಟಿ, ವಿ.ವಿ.ಪುರ, ಬೀರೇನಹಳ್ಳಿ, ಹುಚ್ಚವ್ವನಹಳ್ಳಿ, ಚಿತ್ರದುರ್ಗ ಶೀತಲೀಕರಣ ಕೇಂದ್ರ | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 266 ಕಿ.ಮೀ | 25,000/– | 30,000/– |
| 3 | ಚಿನ್ಮೂಲಾದ್ರಿ–3ಹಾಲು ಶೇಖರಣಾ ಮಾರ್ಗ:– ಚಿತ್ರದುರ್ಗ ಶೀತಲೀಕರಣ ಕೇಂದ್ರದಿಂದ ದೊಡ್ಡಾಲಘಟ್ಟ, ಚಿಕ್ಕಾಲಘಟ್ಟ, ವಡರಸಿದ್ದವ್ವನಹಳ್ಳಿ, ವಿಜಾಪುರ, ಚಿತ್ರದುರ್ಗ ಶೀತಲೀಕರಣ ಕೇಂದ್ರ | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 106 ಕಿ.ಮೀ | 25,000/– | 30,000/– |
| 4 | ಕರಿಸಿದ್ದೇಶ್ವರ–3 ಹಾಲು ಶೇಖರಣಾ ಮಾರ್ಗ :– ಹೊಸದುರ್ಗ ಶೀತಲೀಕರಣ ಕೇಂದ್ರದಿಂದ ಶ್ರೀರಂಗಪುರ, ಬಾಗೂರು , ನಾಗೇನಹಳ್ಳಿ, ಹೊನ್ನೆಕೆರೆ, ಶಿವನಕಟ್ಟೆ ಹೊಸದುರ್ಗ ಶೀತಲೀಕರಣ ಕೇಂದ್ರ | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 64 ಕಿ.ಮೀ | 25,000/– | 30,000/– |
| 5 | ತರಳಬಾಳು –1 ಹಾಲು ಶೇಖರಣಾ ಮಾರ್ಗ:– ದಾವಣಗೆರೆ ಡೇರಿಯಿಂದ ಕುರ್ಕಿ, ಬುಳ್ಳಾಪುರ, ತುರ್ಚಘಟ್ಟ, ಹೊಸಕುಂದವಾಡ, ಹಳೇಕುಂದವಾಡ ದಾವಣಗೆರೆ ಡೇರಿ | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 106ಕಿ.ಮೀ | 25,000/– | 30,000/– |
| 6 | ಬಸವಾ ಪಟ್ಟಣ ಹಾಲು ವಿತರಣಾ ಮಾರ್ಗ :– ಶಿವಮೊಗ್ಗ ಡೇರಿಯಿಂದ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಪಡೆದು ಭದ್ರಾವತಿ ಗ್ರಾಮಾಂತರ ಸಾಸ್ವೇಹಳ್ಳಿ ಮತ್ತು ಬಸವಾಪಟ್ಟಣ ಡೀಲರ್‌ಗಳಿಗೆ ವಿತರಣೆ ಮಾಡುವುದು ಹಾಗೂ ನಗದು ಸಂಗ್ರಹಿಸಿ ಒಕ್ಕೂಟಕ್ಕೆ ಜಮಾ ಮಾಡುವುದು. | 250 ಕ್ರೇಟ್‌ಗಳು | 127 ಕಿ.ಮೀ. | 30,000/– | 2,00,000/– |
| 7 | ಹುಲ್ಲಿನ ಬೀಜ/ಪಶುಮೇವು ಸರಬರಾಜು/ಸಾಗಾಣಿಕೆ ವಾಹನ:– ಶಿವಮೊಗ್ಗ ಡೈರಿಯಿಂದ ಹುಲ್ಲಿನ ಬೀಜ/ಉಗ್ರಾಣ ಸಾಮಾಗ್ರಿಗಳನ್ನು ಅವಶ್ಯಕತೆ ಇದ್ದಾಗ ಮಾತ್ರ ಒಕ್ಕೂಟದ ವ್ಯಾಪ್ತಿಯ ಮೂರು ಜಿಲ್ಲೆಗಳ ಸಂಘಗಳಿಗೆ/ಉಗ್ರಾಣಗಳಿಗೆ ಸಾಗಾಣಿಕೆ ಮಾಡುವುದು. | 2.5 ಟನ್ | 1500 ಕಿ.ಮೀ ಮಾಸಿಕ | 30,000/– | 40,000/– |
| 8 | ಚಳ್ಳಕೆರೆ ಸಂಚಾರಿ ಪಶುವೈದ್ಯಕೀಯ ಮಾರ್ಗ ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ | ಟಾಟಾ ವಿಸ್ತಾ/ಇಂಡಿಗೋ/ ಇಟಿಯೋಸ್/ಜೆಸ್ಟ್/ ಸಿಫ್ಟ್ ಡಿಸೇರ್ | ಮಾಸಿಕ 3000 ಕಿ.ಮೀ | 10,000/– | 20,000/– |
| 9 | ಚಿತ್ರದುರ್ಗ ವಿಭಾಗ ಉಪ ವ್ಯವಸ್ಥಾಪಕರು(ಶೇ) ಕಾರಿನ ಮಾರ್ಗ ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆ | | ಮಾಸಿಕ 3000 ಕಿ.ಮೀ | 10,000/– | 20,000/– |
| 10 | ಚಿತ್ರದುರ್ಗ ಮಾರುಕಟ್ಟೆ ವಿಭಾಗದ ಕಾರಿನ ಮಾರ್ಗ ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆ | | ಮಾಸಿಕ 3000 ಕಿ.ಮೀ | 10,000/– | 20,000/– |

**ನಿಬಂಧನೆ ಮತ್ತು ಷರತ್ತುಗಳು**

1. ಕ್ರ.ಸಂ 1 ರಿಂದ 10 ರವರೆಗಿನ ಹಾಲು ಶೇಖರಣೆ/ವಿತರಣೆ/ಹುಲ್ಲಿನ ಬೀಜ/ಪಶುಮೇವು ಸಾಗಾಣಿಕೆ /ಕಾರಿನ ಮಾರ್ಗಗಳಿಗೆ ವಾಹನ ಹೊಂದಿಲ್ಲದವರು ಸಹ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ. ಆದರೆ ಟೆಂಡರ್ ದರ ಒಪ್ಪಿಗೆಯಾದ 30 ದಿನದೊಳಗೆ ಟೆಂಡರ್‌ನಲ್ಲಿ ಪ್ರಕಟಿಸಿದ ನಿಗದಿತ ಮಾದರಿಯ/ ಸಾಮರ್ಥ್ಯದ ವಾಹನ ಖರೀದಿಸಿ ನೀಡಬಹುದು. ತಪ್ಪಿದಲ್ಲಿ ಟೆಂಡರ್ ನಿಯಮಾನುಸಾರ ಇ.ಎಂ.ಡಿ. ಹಣ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಇ–ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಟೆಂಡರ್‌ದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.

ಮುಂದುವರೆದಿದೆ......

2. **ಕನಿಷ್ಠ ಇ.ಎಂ.ಡಿ. ರೂ. 10,000/– ಆದರೆ ಶೇಖರಣೆ ಮಾರ್ಗದ ವಾಹನಗಳಿಗೆ, ಮ್ಯಾಕ್ಸ್ ಪಿಕ್‌ಅಪ್/ಕಾರು/ಲಘು ವಾಹನಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಯನ್ನು ಇ–ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.**
3. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ಶೇಖರಣೆ/ವಿತರಣೆ/ಹುಲ್ಲಿನ ಬೀಜ/ಪಶುಮೇವು ಸರಬರಾಜು /ಕಾರುಗಳಿಗೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದವತಿಯಿಂದ ನೀಡಲಾಗುವುದಿಲ್ಲ. ಮಾಸಿಕ ಬಿಲ್ಲಿನಲ್ಲಿ ಅನ್ವಯಿಸುವ ಟಿ.ಡಿ.ಎಸ್/ವೃತ್ತಿ ತೆರಿಗೆ/ಜಿಎಸ್.ಟಿ. ಕಠಾಯಿಸಲಾಗುವುದು.
4. ಹಾಲು ಶೇಖರಣಾ/ವಿತರಣಾ ವಾಹನಗಳು **2010** ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು**. ಮತ್ತು ಹಾಲು ವಿತರಣೆ ಮಾರ್ಗಗಳಿಗೆ ಇನ್ಸೂಲೇಟಡ್ ಬಾಡಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ.**
5. **ಟಾಟಾ ವಿಸ್ತಾ/ಇಂಡಿಗೋ/ಇಟಿಯೋಸ್/ಜೆಸ್ಟ್/ಸಿಫ್ಟ್ ಡಿಸೇರ್ 2015** ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು.
6. **ಹುಲ್ಲಿನ ಬೀಜ/ಮೇವು ಸರಬರಾಜು** ವಾಹನವು 2010 ರ ಅಥವಾ ನಂತರದ ಮಾಡಲ್ ಆಗಿರಬೇಕು.
7. ಕ್ರ.ಸಂ 07 ಕ್ಕೆ ಟೆಂಡರ್ ಸಲ್ಲಿಸಬಯಸುವವರು ಹಾಲಿ ಒಕ್ಕೂಟದ ಶಿವಮೊಗ್ಗ ಡೈರಿ ವ್ಯಾಪ್ತಿಯಲ್ಲಿ ಚಲಿಸುತ್ತಿರುವ ಯಾವುದಾದರೂ ಮಾರ್ಗದ ವಾಹನದ ದಾಖಲಾತಿಗಳನ್ನು ನೀಡಬಹುದಾಗಿದೆ. ಹಾಗೂ ಲೋಡಿಂಗ್/ಅನ್ ಲೋಡಿಗ್/ಟೋಲ್ ಫೀಸ್ ಸೇರಿಸಿ ದರ ನಮೂದಿಸುವುದು.
8. ಟೆಂಡರ್ ದರ ಒಪ್ಪಿಗೆಯಾದ ಕೂಡಲೇ ಹಾಲು ಸಾಗಾಣಿಕೆ/ವಿತರಣೆ ವಾಹನವನ್ನು FSSAI ಲೈಸನ್ಸ್/ನೊಂದಣಿ ಮಾಡಿಸುವುದು ಕಡ್ಡಾಯವಾಗಿರುತ್ತದೆ. .
9. ಹಾಲು ಶೇಖರಣೆ ಮಾರ್ಗಗಳಲ್ಲಿ ಬರುವ ಕೆಲವು ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಬಿ.ಎಂ.ಸಿ.ಗಳನ್ನು ಅಳವಡಿಸಿ ಪ್ರಾರಂಭಿಸಲಾಗುತ್ತಿದೆ. ಬಿ.ಎಂ.ಸಿ. ಕೇಂದ್ರವು ಪ್ರಾರಂಭವಾದ ಕೂಡಲೇ ಅಂತಹ ಹಾಲು ಶೇಖರಣೆ ಮಾರ್ಗವನ್ನು ಸ್ಥಗಿತಗೊಳಿಸಲಾಗುವುದು. ಅಥವಾ ಮಾರ್ಗವನ್ನು ಅವಶ್ಯಕತೆಗೆ ತಕ್ಕಂತೆ ಪರಿಷ್ಕರಿಸಲಾಗುವುದು. ಈ ಷರತ್ತಿಗೆ ಬದ್ದರಾದ ವಾಹನ ಮಾಲೀಕರು/ಟೆಂಡರ್‌ದಾರರು ಮಾತ್ರ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.
10. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು.
11. ಹಾಲು ಶೇಖರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಹಾಗೂ ಸಂಘಗಳನ್ನು ಕೈ ಬಿಡಬಹುದು ಅಥವಾ ಸೇರಿಸಬಹುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.
12. ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು /ಟೆಂಡರ್‌ದಾರರು ಬದ್ಧವಾಗಿರಬೇಕು.
13. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ (ಚಾಲಕರು/ಕಂಡಕ್ಟರ್) ವೇತನ/ ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಅಂಗೀಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಶೇಮತಾಂ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ www.shimul.coop ಸಂಪರ್ಕಿಸಬಹುದು.**

ದಿನಾಂಕ : **29.08.2019**

ಸ್ಥಳ : ಮಾಚೇನಹಳ್ಳಿ

**ಸಹಿ/–**

**ವ್ಯವಸ್ಥಾಪಕ ನಿರ್ದೇಶಕರು**

ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ

ಜಿಲ್ಲಾ ಸಹಕಾರ ಹಾಲು ಒಕ್ಕೂಟ